# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಫೆಬ್ರವರಿ 03, 2021

ಸಂಪುಟ : 47 ಸಂಚಿಕೆ : 275 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಪೊಲೀಸರ ಪೀಡನೆ ನಿಲ್ಲದೆ ಮಾತುಕತೆ ಇಲ್ಲ

### ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧಾರ

ನವದೆಹಲಿ, ಫೆ. 2 - ಪೊಲೀಸರು, ಅಧಿಕಾರಿಗಳ ಪೀಡನೆ ನಿಲ್ಲುವವರೆಗೂ ಹಾಗೂ ಬಂಧಿತ ರೈತರನ್ನು ಬಿಡುಗಡೆ ಮಾಡುವವರೆಗೂ ಸರ್ಕಾರದ ಜೊತೆ ಮಾತುಕತೆ ನಡೆಸುವುದಿಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ ತಿಳಿಸಿದೆ.

ಪ್ರತಿಭಟನಾ ಸ್ಥಳಗಳಲ್ಲಿ ಬ್ಯಾರಿಕೇಡ್ ಹೆಚ್ಚಿಸಲಾಗಿದೆ, ಗುಂಡಿಗಳನ್ನು ಅಗಿಯಲಾಗಿದೆ, ರಸ್ತೆಗಳಿಗೆ ಮೊಳೆ ಅಳವಡಿಸಲಾಗಿದೆ, ಸುತ್ತು ತಂತಿ ಬೇಲಿಗಳನ್ನು ಹಾಕಲಾಗಿದೆ, ಆಂತರಿಕ ರಸ್ತೆಗಳನ್ನು ಮುಚ್ಚಲಾಗಿದೆ, ಅಂತರ್ಜಾಲದ ಸೇವೆ ಕಡಿತಗೊಳಿಸಲಾಗಿದೆ ಹಾಗೂ ಬಿಜೆಪಿ - ಆರ್‌ಎಸ್‌ಎಸ್ ಕಾರ್ಯಕರ್ತರ ಮೂಲಕ ಪ್ರತಿಭಟನೆ ನಡೆಸಿ ರೈತ ಸಂಘಟನೆಗಳ ಮೇಲೆ ದಾಳಿ ನಡೆಸಲಾಗುತ್ತಿದೆ ಎಂದು ಮೋರ್ಚಾ ಆರೋಪಿಸಿದೆ.

ಪ್ರತಿಭಟನಾ ಸ್ಥಳಗಳಲ್ಲಿ ಪದೇ ಪದೇ ಅಂತರ್ಜಾಲ ಕಡಿತವಾಗುತ್ತಿರುವುದು ಹಾಗೂ ರೈತ ಹೋರಾಟಕ್ಕೆ ಸಂಬಂಧಿಸಿದ ಹಲವಾರು ಟ್ವಿಟ್ಟರ್ ಖಾತೆಗಳನ್ನು ತಡೆಯುತ್ತಿರುವುದು ಪ್ರಜಾಪ್ರಭುತ್ವದ ಮೇಲೆ ನಡೆಯುತ್ತಿರುವ ಹಲ್ಲೆ ಎಂದೂ ಮೋರ್ಚಾ ದೂರಿದೆ. ರೈತರ (2ನೇ ಪುಟಕ್ಕೆ)

### ಬಂಧಿತರ ಬಿಡುಗಡೆಗೆ ಹೈಕೋರ್ಟ್ ನಕಾರ

**ನವದೆಹಲಿ, ಫೆ. 2 – ದೆಹಲಿಯಲ್ಲಿ ಟ್ರ್ಯಾಕ್ಟರ್ ಪರೇಡ್ ವೇಳೆ ಬಂಧಿತರನ್ನು ಬಿಡುಗಡೆ ಮಾಡಬೇಕೆಂದು ದಾಖಲಾಗಿದ್ದ ಅರ್ಜಿಯನ್ನು ತಳ್ಳಿ ಹಾಕಿರುವ ದೆಹಲಿ ಹೈಕೋರ್ಟ್, ಕಾನೂನು ರೀತ್ಯ ಎಫ್.ಐ.ಆರ್.ಗಳ ಕುರಿತು ಕ್ರಮ ತೆಗೆದುಕೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡಿದೆ. ಟ್ರ್ಯಾಕ್ಟರ್ ಪರೇಡ್ ವೇಳೆ ಸಂಭವಿಸಿದ ಹಿಂಸಾಚಾರದ ಸಂದರ್ಭದಲ್ಲಿ ಬಂಧಿತರನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಹಾಗೂ ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರ ನೇತೃತ್ವದ ಪೀಠ ತಳ್ಳಿ ಹಾಕಿದೆ.** (2ನೇ ಪುಟಕ್ಕೆ)

### ಸೇತುವೆ ನಿರ್ಮಿಸಿ, ಗೋಡೆಗಳನ್ನಲ್ಲ

**ರೈತರ ಪ್ರತಿಭಟನೆಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ರಾಹುಲ್ ಗಾಂಧಿ ತರಾಟೆ**

ನವದೆಹಲಿ, ಫೆ. 2 – ದೆಹಲಿ ಗಡಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳದ ಬಳಿ ಬ್ಯಾರಿಕೇಡ್ ಹಾಗೂ ರಸ್ತೆ ತಡೆಗಳನ್ನು ನಿರ್ಮಿಸಿರುವ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕೇಂದ್ರ ಸರ್ಕಾರ ಸೇತುವೆಗಳನ್ನು ನಿರ್ಮಿಸಬೇಕೇ ಹೊರತು, ಗೋಡೆಗಳನ್ನಲ್ಲ ಎಂದಿದ್ದಾರೆ.

ದೆಹಲಿಯ ಪ್ರತಿಭಟನಾ ಸ್ಥಳಗಳ ಸುತ್ತ ಪೊಲೀಸರು ಬಿಗಿ ಬಂದೋಬಸ್ತ್‌ಗೆ ಕ್ರಮ ತೆಗೆದುಕೊಂಡಿದ್ದು, ಇಡೀ ಪ್ರದೇಶ ಕೋಟೆಯಂತೆ ಕಾಣುತ್ತಿದೆ. ಸಿಂಗು ಗಡಿಯಲ್ಲಿ ಸಿಮೆಂಟ್ ತಡೆಗಳನ್ನು ಅಳವಡಿಸಲಾಗಿದೆ. ರಸ್ತೆಗಳ ನಡುವೆ ಕಬ್ಬಿಣದ ಸರಳು ಬಡಿದು ಟ್ರ್ಯಾಕ್ಟರ್‌ಗಳು ಬರದಂತೆ (2ನೇ ಪುಟಕ್ಕೆ)

## ಕುರುಬ, ಪಂಚಮಸಾಲಿ, ನಾಯಕ ಮೀಸಲಾತಿಗೆ ಪಕ್ಷಾತೀತ ಆಗ್ರಹ

**ಆಡಳಿತಾರೂಢ ಸಚಿವರು, ಶಾಸಕರಿಂದಲೇ ಮೀಸಲಾತಿ ಬೇಡಿಕೆ ಈಡೇರಿಸಲು ಸರ್ಕಾರಕ್ಕೆ ಆಗ್ರಹ, ಧರಣಿ**

ಬೆಂಗಳೂರು, ಫೆ. 2 - ಆಡಳಿತ ಪಕ್ಷದ ಸದಸ್ಯರೇ ತಮ್ಮ ಜನಾಂಗಗಳಿಗೆ ಮೀಸಲಾತಿ ಕಲ್ಪಿಸಬೇಕೆಂದು ವಿಧಾನಸಭೆಯಲ್ಲಿಂದು ಪಕ್ಷಾತೀತವಾಗಿ ಸರ್ಕಾರವನ್ನು ಆಗ್ರಹಿಸಿದ್ದಲ್ಲದೆ, ಧರಣಿ ನಡೆಸಿದ ಘಟನೆಯೂ ಜರುಗಿತು.

ಪಂಚಮಸಾಲಿ ಸಮುದಾಯಕ್ಕೆ 2ಎ ಹಾಗೂ ಕುರುಬ ಸಮುದಾಯಕ್ಕೆ ಎಸ್ಟಿ ಮೀಸಲಾತಿ ಕಲ್ಪಿಸಬೇಕು ಎಂಬ ಕೂಗು ಕೇಳಿಬಂದಿತು.

ಶೂನ್ಯ ವೇಳೆಯಲ್ಲಿ ಬಸನಗೌಡ ಪಾಟೀಲ್ ಯತ್ನಾಳ್ ಮಾಡಿದ ಪ್ರಸ್ತಾಪಕ್ಕೆ ಹಿರಿಯ ಸಚಿವರಾದ ಕೆ.ಎಸ್. ಈಶ್ವರಪ್ಪ ಮತ್ತು ಶ್ರೀರಾಮುಲು, ತಾವು ಸರ್ಕಾರದ ಒಂದು ಭಾಗ ಎಂಬುದನ್ನು ಮರೆತು ಬೆಂಬಲಿಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಮ್ಮುಖದಲ್ಲೇ ಈಶ್ವರಪ್ಪ ಅವರು ಕೆಲವು ದಾಖಲೆಗಳನ್ನು ಯತ್ನಾಳ್‌ಗೆ ನೀಡಿ ಪ್ರಸ್ತಾಪಿಸುವಂತೆ ಮಾಡಿದ್ದಲ್ಲದೆ, ತಾವೂ ಕೂಡ ಧ್ವನಿಗೂಡಿಸಿದರು.

ಮೀಸಲಾತಿಗೆ ಒತ್ತಾಯಿಸಿ ವಿವಿಧ ಸಮುದಾಯದ ಮಠಾಧೀಶರು ಪಾದ ಯಾತ್ರೆ ಆರಂಭಿಸಿದ್ದಾರೆ, ಒಬ್ಬರು ಬೆಂಗಳೂರು ತಲುಪಿದ್ದರೆ, ಮತ್ತೊಬ್ಬರು ದಾವಣಗೆರೆಯಲ್ಲಿದ್ದಾರೆ. ಸಮುದಾಯದ ಭಾವನೆಗಳಿಗೆ ಸರ್ಕಾರ ಸ್ಪಂದಿಸಬೇಕೆಂದು ಯತ್ನಾಳ್ ಒತ್ತಾಯಿಸಿದರು.

ಯತ್ನಾಳ್ ಮಾತು ಆರಂಭಿಸುತ್ತಿದ್ದಂತೆ ಈಶ್ವರಪ್ಪ ಮಾತನಾಡಿ, ಕುರುಬ ಸಮುದಾಯವನ್ನು ಎಸ್‌ಟಿ ವರ್ಗಕ್ಕೆ ಸೇರಿಸಬೇಕೆಂಬ ಕೂಗು ಕೇಳಿಬರುತ್ತಿದೆ, ಜನಾಂಗದ ಮಠಾಧೀಶರು ರಸ್ತೆಗಿಳಿದಿದ್ದಾರೆ, ಮುಖ್ಯಮಂತ್ರಿ ಈ ಬಗ್ಗೆ ಒಂದು ನಿರ್ಧಾರ ಕೈಗೊಳ್ಳಬೇಕು ಎಂದರು.

ಈಶ್ವರಪ್ಪ ಮಾತು ಮುಗಿಸುತ್ತಿದ್ದಂತೆ ಶ್ರೀರಾಮುಲು ಮಾತನಾಡಿ, ನಾಯಕ ಸಮುದಾಯಕ್ಕೆ ಎಸ್‌ಟಿ ಮೀಸಲಾತಿಯಲ್ಲಿ ಶೇಕಡ 7.5ರಷ್ಟು ನಿಗದಿ ಪಡಿಸಬೇಕೆಂದು ಸಮಾಜದ ಮಠಾಧೀಶರು ಮತ್ತು ಜನಾಂಗದವರು ಹೋರಾಟ ಮಾಡುತ್ತಿದ್ದಾರೆ ಎಂದು ಹೇಳಿದರು.

ಈ ಬಗ್ಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡುವ ಇಲ್ಲವೇ ಸ್ವತಂತ್ರ ತೀರ್ಮಾನ ಕೈಗೊಳ್ಳಬೇಕು ಎನ್ನುತ್ತಿದ್ದಂತೆ, ಪಕ್ಷಾತೀತವಾಗಿ ಹಲವು ಶಾಸಕರು ಈ ಬೇಡಿಕೆಯ ಬೆಂಬಲಕ್ಕೆ ನಿಂತರು. ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಲಷ್ಟೇ ಅವಕಾಶವಿದೆ, ಆದರೆ ನೀವು, ಇದನ್ನು ಚರ್ಚೆಯ ವೇದಿಕೆಯನ್ನಾಗಿ ಮಾಡುತ್ತಿದ್ದೀರಿ, (4ನೇ ಪುಟಕ್ಕೆ)

## 28ಕ್ಕೆ ಎಫ್‌ಡಿಎ ಪರೀಕ್ಷೆ

ಬೆಂಗಳೂರು, ಫೆ. 2 - ಸಹಾಯಕ, ಪ್ರಥಮ ದರ್ಜೆ ಸಹಾಯಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಮುಂದೂಡಲ್ಪಟ್ಟಿದ್ದ ಸ್ಪರ್ಧಾತ್ಮಕ ಪರೀಕ್ಷೆಯನ್ನು ಫೆಬ್ರವರಿ 28ಕ್ಕೆ ನಿಗದಿ ಪಡಿಸಲಾಗಿದೆ.

ಕರ್ನಾಟಕ ಲೋಕಸೇವಾ ಆಯೋಗ ಈ ಸಂಬಂಧ ಪ್ರಕಟಣೆ ನೀಡಿದ್ದು, ಜನವರಿ 24ರಂದು ನಡೆಯಬೇಕಿದ್ದ ಪರೀಕ್ಷೆಗಳನ್ನು ಕಾರಣಾಂತರಗಳಿಂದ ಮುಂದೂಡಲ್ಪಟ್ಟಿತ್ತು. ಇದೀಗ ಸಮಯ ನಿಗದಿ ಮಾಡಿದ್ದು, ಅಭ್ಯರ್ಥಿಗಳಿಗೆ ಮೊದಲೇ ದಿನಾಂಕವನ್ನು ತಿಳಿಯ ಪಡಿಸಲಾಗಿದೆ. (4ನೇ ಪುಟಕ್ಕೆ)

## ಪೊಲೀಸರ ವೇತನ ಹೆಚ್ಚಳಕ್ಕಾಗಿ ಸಮಿತಿ

ಬೆಂಗಳೂರು, ಫೆ.2- ನೆರೆ ರಾಜ್ಯಗಳ ಮಾದರಿ ರಾಜ್ಯದ ಪೊಲೀಸರ ವೇತನ ಹೆಚ್ಚಳ ಕುರಿತು ಅಧ್ಯಯನ ನಡೆಸಿ ವರದಿ ನೀಡಲು ಪೊಲೀಸ್ ಮಹಾನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ.

ಔರಾದ್ಕರ್ ಸಮಿತಿ ನೀಡಿದ ಶಿಫಾರಸ್ಸಿನ ಅನ್ವಯ ರಾಜ್ಯದ ಪೊಲೀಸರಿಗೆ ವೇತನ ಮತ್ತಿತರೆ ಸೌಲಭ್ಯಗಳನ್ನು ಒದಗಿಸಲಾಗಿದ್ದರೂ ನೆರೆ ರಾಜ್ಯಗಳ ಪೊಲೀಸರು ಹಾಗೂ (4ನೇ ಪುಟಕ್ಕೆ)

## ಮೇ 4ರಿಂದ ಸಿಬಿಎಸ್‌ಇ 10, 12ನೇ ತರಗತಿ ಪರೀಕ್ಷೆ

ನವದೆಹಲಿ, ಫೆ. 2 – ಸಿ.ಬಿ.ಎಸ್.ಇ. 10 ಹಾಗೂ 12ನೇ ತರಗತಿಯ ಪರೀಕ್ಷೆಗಳು ಮೇ 4 ರಿಂದ ಆರಂಭವಾಗಲಿವೆ. ಹತ್ತನೇ ತರಗತಿಯ ಪರೀಕ್ಷೆಗಳು ಜೂನ್ 7ಕ್ಕೆ ಹಾಗೂ 12ನೇ ತರಗತಿಯ ಪರೀಕ್ಷೆಗಳು ಜೂನ್ 10ಕ್ಕೆ ಅಂತ್ಯವಾಗಲಿವೆ.

ಸಾಮಾನ್ಯವಾಗಿ ಜನವರಿಯಲ್ಲಿ ಪ್ರಾಯೋಗಿಕ ಹಾಗೂ ಫೆಬ್ರವರಿಯಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ. ಕೊರೊನಾ ಕಾರಣದಿಂದಾಗಿ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಅಲ್ಲದೇ ಪರೀಕ್ಷೆಗಳನ್ನು ಬೆಳಿಗ್ಗೆ 10.30 ಹಾಗೂ ಮಧ್ಯಾಹ್ನ 2.30ರ ಎರಡು ಪಾಳೆಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

## ಬಾಡಿಗೆ ಕಟ್ಟದ ಪಾಲಿಕೆ ಮಳಿಗೆಗಳಿಗೆ ಬೀಗ

### ಪಾಲಿಕೆಗೆ ಸೇರಿದ 506 ಮಳಿಗೆಗಳಿಂದ 2.10 ಕೋಟಿ ರೂ. ಬಾಡಿಗೆ ಬಾಕಿ

ದಾವಣಗೆರೆ, ಫೆ.2- ಮಹಾನಗರ ಪಾಲಿಕೆಯ ಮಳಿಗೆಗಳನ್ನು ಪಡೆದು ಹಲವಾರು ವರ್ಷಗಳಿಂದ ಬಾಡಿಗೆ ಪಾವತಿಸದೇ ಇರುವ ವ್ಯಾಪಾರಸ್ಥರಿಗೆ ಪಾಲಿಕೆ ಅಧಿಕಾರಿಗಳು ಮಳಿಗೆಗಳಿಗೆ ಬೀಗ ಜಡಿಯುವ ಮೂಲಕ ಬಿಸಿ ಮುಟ್ಟಿಸಿದ್ದಾರೆ.

ಮಹಾನಗರ ಪಾಲಿಕೆ ಆಯುಕ್ತರ ನಿರ್ದೇಶನದ ಮೇರೆಗೆ ಪಾಲಿಕೆಯ ಕಂದಾಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಪಾಲಿಕೆಗೆ ಸೇರಿದ ಬಾಡಿಗೆ ಕಟ್ಟಡದ 8 ಮಳಿಗೆಗಳಿಗೆ ಮಂಗಳವಾರ ಬೀಗ ಜಡಿದಿದ್ದಾರೆ.

ನಗರದ ವಿವಿಧೆಡೆ ಪಾಲಿಕೆಗೆ ಸೇರಿದ 506 ಮಳಿಗೆಗಳಿವೆ. ಕೆಲವರು ಎರಡ್ಮೂರು ತಿಂಗಳು



ಗಳಿಂದ ಬಾಡಿಗೆ ಉಳಿಸಿಕೊಂಡಿದ್ದರೆ, ಮತ್ತೆ ಕೆಲವರು ಹಲವಾರು ವರ್ಷಗಳಿಂದ ಬಾಡಿಗೆ ಕಟ್ಟಿಲ್ಲ. ಒಟ್ಟಾರೆ ಇಲ್ಲಿಯವರೆಗೆ 2 ಕೋಟಿ 65 ಲಕ್ಷ ರೂ. ಬಾಡಿಗೆ ಪಾಲಿಕೆಗೆ ಪಾವತಿಯಾಗಬೇಕಿತ್ತು. ಆದರೆ ಸುಮಾರು 70 ಲಕ್ಷದಷ್ಟು ಹಣ ಮಾತ್ರ ಪಾವತಿಯಾಗಿದೆ. ಈ ಹಿನ್ನೆಲೆಯಲ್ಲಿ ಆಯುಕ್ತರ ಆದೇಶದಂತೆ ಪ್ರತಿ ಮಳಿಗೆ ಮಾಲೀಕರಿಗೂ ಬಾಡಿಗೆ ಪಾವತಿಸಲು ಪ್ರತ್ಯೇಕವಾಗಿ ನೋಟೀಸ್ ಮೂಲಕ ಗಡುವು ನೀಡಿ, ಡಿಸೆಂಬರ್ ವರೆಗೆ 53.78 ಲಕ್ಷ ರೂ. ಬಾಡಿಗೆ ಹಣ ವಸೂಲಿ ಮಾಡಲಾಗಿತ್ತು. ಇನ್ನೂ 2.10 ಕೋಟಿ ರೂ. ಬಾಕಿ ಇದ್ದು, (3ನೇ ಪುಟಕ್ಕೆ)

### ನಿವೇಶನ ಸ್ವಚ್ಛಗೊಳಿಸಿ ಮಾಲೀಕರಿಂದ ಹಣ ವಸೂಲಿ: ಆಯುಕ್ತ

**ಖಾಲಿ ನಿವೇಶನಗಳಲ್ಲಿರುವ ಕಸ, ಜಾಲಿ ಗಿಡ ಸ್ವಚ್ಛಗೊಳಿಸಿ ಮಾಲೀಕರಿಂದಲೇ ಹಣ ವಸೂಲಿ ಮಾಡಲಾಗುವುದು. ಈ ಕಾರ್ಯ ಮುಖ್ಯ ರಸ್ತೆಗಳ ಬಳಿ ರುವ ಖಾಲಿ ನಿವೇಶನಗಳಿಂದ ಆರಂಭವಾಗಲಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಹೇಳಿದ್ದಾರೆ.**

**ನಗರದ ಸ್ವಚ್ಛತೆಗೆ ಆದ್ಯತೆ ನೀಡುವ ದೃಷ್ಟಿಯಿಂದ ಹಲವಾರು ಬಾರಿ ಖಾಲಿ ನಿವೇಶನಗಳ** (3ನೇ ಪುಟಕ್ಕೆ)

## ಉತ್ತಮ ಬಾಂಧವ್ಯ ರೂಢಿಸಿಕೊಂಡರೆ ರೌಡಿ ಪಟ್ಟದಿಂದ ವಿಮುಕ್ತಿ: ಕುಮಾರ್

### ಹರಪನಹಳ್ಳಿ: ಗೂಂಡಾ ಪ್ರಕರಣಗಳಲ್ಲಿ ದಾಖಲಾಗಿರುವ ವ್ಯಕ್ತಿಗಳಿಗೆ ಸಿಪಿಐ ಕಿವಿಮಾತು



ಹರಪನಹಳ್ಳಿ, ಫೆ.2- ನಡವಳಿಕೆ ತಿದ್ದಿಕೊಂಡು ಒಳ್ಳೆಯ ರೀತಿಯಲ್ಲಿ ಜೀವನ ಸಾಗಿಸಿ, ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ರೂಢಿಸಿಕೊಂಡರೆ ರೌಡಿಸಂ ಪಟ್ಟದಿಂದ ವಿಮುಕ್ತಿಗೊಳ್ಳಬಹುದು ಎಂದು ಸಿಪಿಐ ಕೆ. ಕುಮಾರ ಕಿವಿಮಾತು ಹೇಳಿದರು.

ಪಟ್ಟಣದ ಸರ್ಕಾರಿ ಜ್ಯೂನಿಯರ್ ಕಾಲೇಜ್ ಆವರಣದಲ್ಲಿ ತಾಲ್ಲೂಕಿನ ನಾಲ್ಕು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಗೂಂಡಾ ಅಥವಾ ರೌಡಿಸಂ ಕಾಯ್ದೆಯಡಿ ಪ್ರಕರಣಗಳಲ್ಲಿ ದಾಖಲಾಗಿರುವ ವ್ಯಕ್ತಿಗಳೊಂದಿಗೆ ಸಮಾಲೋಚನೆ ನಡೆಸಿದರು.

ರೌಡಿ ಎನ್ನುವ ಹಣೆಪಟ್ಟಿ ಇರುವವರೆಗೂ ನಿಮ್ಮ ಬದುಕು ಸುಖಮಯವಾಗಿರುವುದಿಲ್ಲ. ರಾತ್ರಿ, ಹಗಲು ಎನ್ನದೇ ಪೊಲೀಸರು ನಿಮ್ಮ ಮನೆಯ ಬಾಗಿಲನ್ನು ತಟ್ಟುತ್ತಾರೆ. ಇದರಿಂದ ನಿಮಗೆ, ಅಕ್ಕಪಕ್ಕದ ಮನೆಯವರಿಗೆ ಹಾಗೂ ಸಂಬಂಧಿಕರಿಗೂ ಇರುಸು ಮುರುಸಾಗುತ್ತದೆ. ಸಮಾಜದಲ್ಲಿ ಗೌರವ ಕಡಿಮೆಯಾಗುತ್ತದೆ. ಇದರಿಂದ ಹೊರಬರಲು ಒಳ್ಳೆಯ ನಡತೆಯನ್ನು ಮೈಗೂಡಿಸಿಕೊಳ್ಳಬೇಕು. ಪೊಲೀಸರು ನಿಮ್ಮ ನಡತೆಯ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಿ, ರೌಡಿ ಪಟ್ಟಿಯಿಂದ ಬಿಡುಗಡೆ ಮಾಡಲಿದ್ದಾರೆ ಎಂದರು.

ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಆದೇಶದಂತೆ ರೌಡಿ ಶೀಟರ್‌ಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. (2ನೇ ಪುಟಕ್ಕೆ)

## ಹುಕ್ಕಾಬಾರ್ ನಿಷೇಧಕ್ಕೆ ಸರ್ಕಾರದ ಕ್ರಮ

ಬೆಂಗಳೂರು, ಫೆ.2 - ಯುವ ಜನಾಂಗದ ಬದುಕಿನ ದಿಕ್ಕು ತಪ್ಪಿಸುತ್ತಿರುವ ಹುಕ್ಕಾಬಾರ್‌ಗಳನ್ನು ನಿಷೇಧಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ವಿಧಾನಸಭೆಯಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯೆ ಸೌಮ್ಯ ರೆಡ್ಡಿ ಪ್ರಸ್ತಾವಕ್ಕೆ ಉತ್ತರಿಸಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕೆಲವು ರಾಜ್ಯಗಳಲ್ಲಿ ಹುಕ್ಕಾ ಬಾರ್‌ಗಳನ್ನು ನಿಷೇಧಿಸಿದ್ದಾರೆ, ಆ ರಾಜ್ಯಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ತರಿಸಲಾಗಿದೆ ಎಂದರು.

ವರದಿ ಅಧ್ಯಯನ ನಡೆಸಿ ರಾಜ್ಯದಲ್ಲೂ ಹುಕ್ಕಾ ಬಾರ್‌ಗಳನ್ನು ನಿಷೇಧಿಸಲು ಕ್ರಮ ಕೈಗೊಳ್ಳಲಾಗುವುದು. ನೇರವಾಗಿ ಇದು ನಮ್ಮ ಇಲಾಖಾ ವ್ಯಾಪ್ತಿಗೆ ಬರುವುದಿಲ್ಲ, ಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳು (2ನೇ ಪುಟಕ್ಕೆ)

## ಜಿಎಸ್‌ಟಿ: 1,500 ಕೋಟಿ ಕಡಿತ

ಬೆಂಗಳೂರು, ಫೆ. 2 - ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಿರುವ ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ) ಹಣದಲ್ಲಿ 1,500 ಕೋಟಿ ರೂ.ಗಳಷ್ಟು ಕಡಿತವಾಗಬಹುದು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

**ಗೃಹ ಸಚಿವ ಬಸವರಾಜ ಬೊಮ್ಮಾಯಿ**

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಯಶವಂತರಾವ್ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಈ ವರ್ಷ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ 12,047 ಕೋಟಿ ರೂ. ಪಾಲು ನಿಗದಿಯಾಗಿದೆ, ಈ ಮೊತ್ತದ ಪೈಕಿ ಮೊದಲ ಕಂತಿನಲ್ಲಿ 3000 ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತ ಬಂದಿದೆ, ಉಳಿದ ಹಣವನ್ನು ಸಾಲದ ರೂಪದಲ್ಲಿ ಪಡೆಯಲು ಕೇಂದ್ರ ಸರ್ಕಾರ ಅವಕಾಶ ನೀಡಿದ್ದು, ಈ ಪೈಕಿ ಸುಮಾರು 6000 ಕೋಟಿ ರೂ.ಗಳಷ್ಟು ಬಂದಿದೆ ಎಂದರು. ಇನ್ನೂ 3,427 ಕೋಟಿ ರೂ. ಬರಬೇಕಿದ್ದು ಸದ್ಯದಲ್ಲೇ ಲಭ್ಯವಾಗುವ ನಿರೀಕ್ಷೆ ಇದೆ, ಆದಾಗ್ಯೂ ಜಿ.ಎಸ್.ಟಿ. (3ನೇ ಪುಟಕ್ಕೆ)






## ಎಸ್.ಎಸ್.ಎಂ. ನಗರದಲ್ಲೊಂದು ಸ್ಮಾರ್ಟ್ ಸ್ಟೇಡಿಯಂ

**ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ**

ದಾವಣಗೆರೆ: ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕ್ರೀಡೆಗಳು ಸಹಕಾರಿ ಎನ್ನುವುದು ಎಷ್ಟು ಸತ್ಯವೋ, ಕ್ರೀಡಾಪಟುಗಳ ಸಾಧನೆಗೆ ಕ್ರೀಡಾಂಗಣಗಳು ಅತಿ ಅಗತ್ಯ ಎನ್ನುವುದೂ ಸಹ ಅಷ್ಟೇ ಸತ್ಯ.

ಬಹುತೇಕ ನಗರಗಳಲ್ಲಿ ಕ್ರೀಡಾಂಗಣ ಗಳಿರುವಂತೆ ದಾವಣಗೆರೆಯಲ್ಲೂ ಜಿಲ್ಲಾ ಕ್ರೀಡಾಂಗಣವಿದೆ. ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದ ಅನೇಕ ಕ್ರೀಡಾಪಟುಗಳು ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾಭ್ಯಾಸ ಮಾಡಿದವರು.

ನಗರ ಶರವೇಗದಲ್ಲಿ ಬೆಳೆಯುತ್ತಲೇ ಇದೆ. ವಿದ್ಯಾರ್ಥಿಗಳು, ಕ್ರೀಡಾಪಟುಗಳು, ಕ್ರೀಡಾಸಕ್ತರ ಸಂಖ್ಯೆಯೂ ಹೆಚ್ಚುತ್ತಿದೆ. ದೇವನಗರಿಗೆ ಮತ್ತೊಂದು ಕ್ರೀಡಾಂಗಣ ಇದ್ದರೆ ಚೆನ್ನ ಎನ್ನುವುದು ಹಲವಾರು ಕ್ರೀಡಾಪಟುಗಳ ಆಶಯವಾಗಿತ್ತು.

ಇದೀಗ ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನಗರದ ಹಳೆ ಭಾಗದಲ್ಲಿರುವ ಎಸ್.ಎಸ್.ಎಂ. ನಗರದಲ್ಲಿ ನೂತನ ಸುಸಜ್ಜಿತ ಕ್ರೀಡಾಂಗಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ . 6 ಎಕರೆ ಪ್ರದೇಶದಲ್ಲಿ ಸುಮಾರು 10 (2ನೇ ಪುಟಕ್ಕೆ)



**ಸ್ಮಾರ್ಟ್ ಸಿಟಿ ಲಿ.ಯೋಜನೆಯಡಿ 10 ಕೋಟಿ ರೂ. ವೆಚ್ಚದಲ್ಲಿ ಸುಂದರ ಹಾಗೂ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ. ನಿರ್ಮಾಣದ ನಂತರ ನಿರ್ವಹಣೆಗೆ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗುವುದು. ನೂತನ ಕ್ರೀಡಾಂಗಣದಿಂದ ನಗರದ ಕ್ರೀಡಾಪಟುಗಳು, ಅದರಲ್ಲೂ ಹಳೆ ಭಾಗದ ಕ್ರೀಡಾಪಟುಗಳಿಗೆ ಅನುಕೂಲವಾಗಲಿದೆ.**

**- ರವೀಂದ್ರ ಮಲ್ಲಾಪುರ,**
**ವ್ಯವಸ್ಥಾಪಕ ನಿರ್ದೇಶಕರು, ಸ್ಮಾರ್ಟ್ ಸಿಟಿ ಲಿ.,**

### ಏನೆಲ್ಲಾ ಇರಲಿದೆ ಸ್ಟೇಡಿಯಂನಲ್ಲಿ ?

6 ಪಥಗಳ 400 ಮೀಟರ್ ಓಟದ್ ಟ್ರ್ಯಾಕ್ ನಿರ್ಮಿಸಲಾಗುತ್ತದೆ. ಫುಟ್ ಬಾಲ್, ವಾಲಿಬಾಲ್, ಟೆನ್ನಿಸ್, ಕ್ರಿಕೆಟ್, ಉದ್ದ ಜಿಗಿತ, ಎತ್ತರ ಜಿಗಿತ, ಶಾಟ್ ಪುಟ್ ಎಸೆತದಂತಹ ಆಟಗಳಿಗೆ ಕ್ರೀಡಾಂಗಣ ನೆರವಾಗಲಿದೆ. ವೀಕ್ಷಕರು ಕುಳಿತುಕೊಳ್ಳಲು 1000 ಆಸನಗಳ ವ್ಯವಸ್ಥೆ ಇರಲಿದೆ. ಭವಿಷ್ಯದಲ್ಲಿ 2 ಸಾವಿರ ಆಸನಗಳಿಗೆ ವಿಸ್ತರಿಸಬಹುದಾಗಿದೆ. ದೈಹಿಕ ಕಸರತ್ತು ನಡೆಸಲು ಜಿಮ್, ಸ್ಟೋರ್ ರೂಂ, ಆಫೀಸ್ ರೂಂ, ಪ್ರಥಮ ಚಿಕಿತ್ಸಾ ಕೊಠಡಿ, ಸಿಸಿ ಟಿವಿ ಕೊಠಡಿ, ಪುರುಷರ ವಸತಿ ಕೊಠಡಿ, ಚಿಕ್ಕ ಅಡುಗೆ ಕೊಠಡಿ, ವಾಶ್ ರೂಂ, ಗ್ಯಾಲರಿ, ಪುರುಷ ಹಾಗೂ ಮಹಿಳೆಯರ ಪ್ರತ್ಯೇಕ ಶೌಚಾಲಯ ಇತ್ಯಾದಿ ಸೌಲಭ್ಯಗಳನ್ನು ಈ ಸುಸಜ್ಜಿತ ಕ್ರೀಡಾಂಗಣ ಹೊಂದಿರಲಿದೆ. ತುರ್ತು ವೈದ್ಯಕೀಯ ಸಹಾಯಕ್ಕೊಂದು ಕೊಠಡಿ, ಕಾರು ಹಾಗೂ ಬೈಕ್‌ಗಳ ಪಾರ್ಕಿಂಗ್ ಮಾಡಲು ವ್ಯವಸ್ಥೆ. ಭದ್ರತೆ ವ್ಯವಸ್ಥೆಯಲ್ಲಿ ಪ್ರತ್ಯೇಕ ಆಗಮನ, ನಿರ್ಗಮನ ವ್ಯವಸ್ಥೆ ಇರಲಿದೆ. ಅಲ್ಲದೆ ಕ್ರೀಡಾಂಗಣಕ್ಕೆ ಬರುವ ಜನಸ್ತೋಮ ನಿರ್ವಹಿಸಲು ವಿಶಾಲವಾದ ರಸ್ತೆಗಳನ್ನು ಹೊಂದಿರುವ ಸಂಚಾರಿ ಯೋಜನೆ ರೂಪಿಸಲಾಗುತ್ತಿದೆ.

## ಜನಸಂಖ್ಯೆ ಆಧರಿಸಿ ಗ್ರಾಮ ಪಂಚಾಯಿತಿ ಮೇಲ್ದರ್ಜೆಗೆ

ಬೆಂಗಳೂರು, ಫೆ.2- ಜನಸಂಖ್ಯೆ ಆಧರಿಸಿ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾ ಯತ್‌ಗಳಾಗಿ ಮೇಲ್ದರ್ಜೆಗೇರಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದ್ದು, 10 ಜಿಲ್ಲೆಗಳ 30 ಗ್ರಾಮ ಪಂಚಾಯತ್‌ಗಳನ್ನು ಶೀಘ್ರವೇ ಮೇಲ್ದರ್ಜೆಗೆ ಏರಿಸಲಾಗುವುದು ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್ ವಿಧಾನಪರಿಷತ್‌ನಲ್ಲಿಂದು ತಿಳಿಸಿದ್ದಾರೆ. ಕೆ.ಹರೀಶ್‌ಕುಮಾರ್ ಪ್ರಶ್ನೆಗೆ ಉತ್ತರಿಸಿ ದ ಸಚಿವರು, 15 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯ ಗ್ರಾಮ ಪಂಚಾಯತ್‌ಗಳನ್ನು ಮೇಲ್ದರ್ಜೆಗೇರಿಸಲು 2015ರಲ್ಲೇ ಸಂಪುಟದಲ್ಲಿ ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ, ವಿಜಯಪುರ ಜಿಲ್ಲೆಯ ತಿಕೋಟ, ಕಲಬುರಗಿಯ ಕಮಲಾಪುರ, ಎಡ್ರಾಮಿ, ಉಡುಪಿಯ ಬೈಂದೂರು, ದಾವಣಗೆರೆ ಜಿಲ್ಲೆಯ ನ್ಯಾಮತಿ, ಬಾಗಲಕೋಟೆಯ ಲೋಕಾಪುರ ಮತ್ತು ಶಿರೂರು ಪಂಚಾಯತ್‌ಗಳನ್ನು ಮೇಲ್ದರ್ಜೆಗೇರಿಸಲಾಗಿದೆ ಎಂದು ಹೇಳಿದರು.

## ಎಸ್‌ಎಸ್‌ಎಂ ನಗರದಲ್ಲಿ ಸ್ಟೇಡಿಯಂ

**(1ನೇ ಪುಟದಿಂದ)** ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವ ಈ ಸ್ಟೇಡಿಯಂ ಹಲ ವೈಶಿಷ್ಟ್ಯತೆಗಳನ್ನು ಹೊಂದಲಿದೆ.

ಇಲ್ಲಿಯವರೆಗೆ ದಾವಣಗೆರೆ ಹಳೆ ಭಾಗದಲ್ಲಿ ಕ್ರೀಡಾಪಟುಗಳಿಗೆ ಅನುಕೂಲ ವಾಗುವಂತಹ ಕ್ರೀಡಾಂಗಣಗಳು ಇರಲಿಲ್ಲ. ಕ್ರೀಡೆಗಳಲ್ಲಿ ಭಾಗವಹಿಸಲು ಅಥವಾ ಕ್ರೀಡಾಭ್ಯಾಸಕ್ಕೆಂದು ಜಿಲ್ಲಾ ಕ್ರೀಡಾಂಗಣ, ನೇತಾಜಿ ಸುಭಾಶ್ ಚಂದ್ರಬೋಸ್ ಒಳಾಂಗಣ ಕ್ರೀಡಾಂಗಣ, ಹೈಸ್ಕೂಲ್ ಮೈದಾನ ಅಥವಾ ಖಾಸಗಿ ಶಾಲಾ ಕ್ರೀಡಾಂಗ ಣಗಳನ್ನು ಆಶ್ರಯಿಸಬೇಕಾಗಿತ್ತು. ಹಳೆಯ ಭಾಗದ ಶಾಲಾ ಮಕ್ಕಳಿಗೆ ಕ್ರೀಡಾಕೂಟಗಳನ್ನು ನಡೆಸಲು ಶಿಕ್ಷಕರು ಹರಸಾಹಸ ಪಡಬೇಕಾಗಿತ್ತು. ಇಂತಹ ಎಲ್ಲಾ ಸಮಸ್ಯೆಗಳಿಗೆ ನೂತನ ಸ್ಟೇಡಿಯಂ ಪರಿಹಾರ ನೀಡಬಲ್ಲದು.

ಇತ್ತೀಚಿನ ದಿನಗಳಲ್ಲಿ ಮುಂಜಾನೆ ವೇಳೆ ಅದರಲ್ಲೂ ವಾರದ ರಜಾ ದಿನಗಳಲ್ಲಿ ಜಿಲ್ಲಾ ಕ್ರೀಡಾಂಗಣವು ಕ್ರೀಡಾಪಟುಗಳು, ವಾಯು ವಿಹಾರಿಗಳಿಂದ ತುಂಬಿ ಹೋಗುತ್ತಿತ್ತು. ಅನೇಕರು ಕ್ರೀಡಾಭ್ಯಾಸಕ್ಕೆ ಜಾಗವಿಲ್ಲವೆಂದು ವಾಪಾಸ್ ಹೋಗುತ್ತಿದ್ದುದೂ ಉಂಟು. ಆದರೆ ಇದೀಗ ನಿರ್ಮಿಸಲಾಗುವ ನೂತನ ಕ್ರೀಡಾಂಗಣ ದಾವಣಗೆರೆ ಕ್ರೀಡಾಪಟುಗಳ ಸಾಧನೆಗೆ ಕೊಡುಗೆ ನೀಡಲಿದೆ.

ಜನತೆ ಮಾಗಾನಹಳ್ಳಿ ಕಡೆಯಿಂದ ಇತ್ತ ಬರಲು ಎರಡು ಕೋಟಿ ರೂ. ವೆಚ್ಚದಲ್ಲಿ ಬ್ರಿಡ್ಜ್ ನಿರ್ಮಿಸಲೂ ಸಹ ಸ್ಮಾರ್ಟ್ ಸಿಟಿ ಲಿಮಿಟೆಡ್ ಅಧಿಕಾರಿಗಳು ಮುಂದಾಗಿದ್ದರಾರೆ.

ಸ್ಮಾರ್ಟ್ ಸಿಟಿಯ ಬಹುಪಾಲು ಯೋಜ ನೆಗಳು ಹೊಸ ಭಾಗಕ್ಕಷ್ಟೇ ಮೀಸಲಾಗುತ್ತವೆ ಎಂಬ ಆರೋಪ ಈ ಯೋಜನೆಯಿಂದ ತುಸು ಕಡಿಮೆಯಾಗಬಹುದು.

## ಹುಕ್ಕಾಬಾರ್ ನಿಷೇಧಕ್ಕೆ ಸರ್ಕಾರದ ಕ್ರಮ

**(1ನೇ ಪುಟದಿಂದ)** ಆದಾಯ ವೃದ್ಧಿಗೆ ಹುಕ್ಕಾ ಬಾರ್‌ಗೆ ಅನುಮತಿ ನೀಡುತ್ತಿವೆ. ಇವು ನಾಯಿ ಕೊಡೆಗಳಂತೆ ವ್ಯಾಪಿಸಿವೆ, ನಗರಗಳ ಹೊರವಲ ಯದಲ್ಲಿ ಕಾಫಿ ಕ್ಲಬ್‌ಗಳ ಹೆಸರಿನಲ್ಲಿ ಹುಕ್ಕಾ ಬಾರ್‌ಗಳು ಮಾದಕ ದ್ರವ್ಯ ಕೇಂದ್ರಗಳಾಗಿ ಮಾರ್ಪಡುತ್ತಿವೆ ಎಂಬ ಮಾಹಿತಿ ಇದೆ ಎಂದು ಹೇಳಿದ್ದಾರೆ.

ಬಡವರು, ಶ್ರೀಮಂತರೆನ್ನದೆ ಎಲ್ಲ ವರ್ಗಗಳವರೂ ಮಾದಕ ವಸ್ತುಗಳ ವ್ಯಸನಿಗಳಾಗುತ್ತಿದ್ದು, ಇದನ್ನು ಕಟ್ಟುನಿಟ್ಟಾಗಿ ತಡೆಯಲು ನಿರಂತರ ಪ್ರಯತ್ನ ನಡೆಸಲಾಗುತ್ತಿದೆ ಎಂದರು. ಈಗಾಗಲೇ ಪೊಲೀಸರು ಕೆಲವು ಕ್ಲಬ್‌ಗಳ ಮೇಲೆ ದಾಳಿ ಮಾಡಿದ್ದಾರೆ, ಮಾದಕ ದ್ರವ್ಯ ಮಾರಾಟ ಮತ್ತು ಸೇವನೆ ಹಾವಳಿ ತಪ್ಪಿಸಲು ಬಿಗಿ ಕ್ರಮ ಕೈಗೊಳ್ಳಲಾಗುವುದು. ಇಷ್ಟರ ನಡುವೆಯೂ ಹುಕ್ಕಾಬಾರ್‌ಗಳಲ್ಲಿ ಮಾದಕ ದ್ರವ್ಯ ಮಾರಾಟ ಮುಂದುವರೆದಿದೆ, ಇದನ್ನು ಹತ್ತಿಕ್ಕಲು ಜನಜಾಗೃತಿಯಿಂದ ಮಾತ್ರ ಸಾಧ್ಯ ಎಂದರು.

# ಪ್ರಾಮಾಣಿಕ ಕಾಯಕಕ್ಕೆ ಇನ್ನೊಂದು ಹೆಸರೇ ಮಾಚಿದೇವರು

## ರಾಣೇಬೆನ್ನೂರಿನ ಮಡಿವಾಳ ಮಾಚಿದೇವ ಜಯಂತ್ಯೋತ್ಸವದಲ್ಲಿ ಜಿ.ಪಂ. ಅಧ್ಯಕ್ಷ ಏಕನಾಥ ಭಾನುವಳ್ಳಿ



ರಾಣೇಬೆನ್ನೂರು, ಫೆ. 2- ಜಗಜ್ಯೋತಿ ಬಸವಣ್ಣನವರ ಸಮಕಾಲೀನರಾದ ಕಾಯಕ ಯೋಗಿ ಮಡಿವಾಳ ಮಾಚಿದೇವರ ಕೊಡುಗೆ ಮಡಿವಾಳ ಸಮಾಜಕ್ಕೆ ಅಪಾರವಾಗಿದೆ. ವಚನಗಳ ಮೂಲಕ ಸಮಾಜ ತಿದ್ದುವ ಕೆಲಸ ಮಾಡಿ ಮಾಚಿದೇವರು ಅಮರರಾಗಿದ್ದಾರೆ ಎಂದು ಜಿ.ಪಂ. ಅಧ್ಯಕ್ಷ ಏಕನಾಥ ಭಾನುವಳ್ಳಿ ಹೇಳಿದರು.

ನಗರದ ಮಿನಿ ವಿಧಾನಸೌಧದ ಸಭಾಂಗ ಣದಲ್ಲಿ ರಾಜ್ಯ ಸರ್ಕಾರದ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ವಿವಿಧ ಮಡಿವಾಳ ಸಂಘಗಳ ಮತ್ತು ತಾಲ್ಲೂಕು ಮಟ್ಟದ ವಿವಿಧ ಸರ್ಕಾರಿ ಇಲಾಖೆಗಳ ನೇತೃತ್ವದಲ್ಲಿ ಸರಳ ಹಾಗೂ ವಿಧ್ಯುಕ್ತವಾಗಿ ಏರ್ಪಡಿಸಿದ್ದ ಕಾಯಕ ಯೋಗಿ ಶ್ರೀ ಮಡಿವಾಳ ಮಾಚಿದೇವ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾಯಕಕ್ಕೆ ಇನ್ನೊಂದು ಹೆಸರೇ ಮಾಚಿ ದೇವರು ಆಗಿದ್ದರು. ಅಂತಹ ಶರಣರ ಆದರ್ಶಗಳನ್ನು ಸರ್ವರೂ ಜೀವನದಲ್ಲಿ ರೂಢಿಸಿಕೊಂಡು ಮುನ್ನಡೆಯಬೇಕು. ಭಕ್ತಿಯಿಂದ ಸಾಮಾಜಿಕ ಸುವ್ಯವಸ್ಥೆ, ಧಾರ್ಮಿಕ, ಶರಣ ಸಂಸ್ಕೃತಿಯ ಮೂಲಕ ಮರೆಯಲಾರದಂತಹ ಕೊಡುಗೆಯನ್ನು ಮಾಚಿದೇವರು ನೀಡಿದ್ದಾರೆ. ಯಾವುದೇ ಶರಣರನ್ನು ಧಾರ್ಮಿಕ ಪಂಥಕ್ಕೆ, ಜಾತೀಯತೆಗೆ ಸೀಮಿತಗೊಳಿ ಸದೆ ಅವರ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಂಡು ಸಾಗಿದಾಗ ನೆಮ್ಮದಿಯ ಜೀವನ ಕಾಣಲು ಸಾಧ್ಯ ಎಂದು ಏಕನಾಥ ಹೇಳಿದರು.

ನ್ಯಾಯವಾದಿ ಹಾಗೂ ನೋಟರಿ ಕುಮಾರ ಮಡಿವಾಳರ ಮಾತನಾಡಿ, ಇದೀಗ ಮಾಚಿದೇವರ 146 ವಚನಗಳು ಮಾತ್ರ ಲಭ್ಯ ವಾಗಿವೆ. ಇನ್ನೂ ಇವರ ವಚನಗಳು ಸಾಕಷ್ಟಿದ್ದು, ಅವುಗಳ ಶೋಧನೆ ನಡೆಯಬೇಕಿದೆ. ದೇಶದ 18 ರಾಜ್ಯಗಳಲ್ಲಿ ಈ ಮಡಿವಾಳ ಸಮಾಜವು ಪ.ಜಾತಿಗೆ ಸೇರ್ಪಡೆಗೊಂಡಿದ್ದು, ಕರ್ನಾಟಕದಲ್ಲೂ ಪ.ಜಾತಿ ಮೀಸಲಿಗೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶೀಘ್ರವೇ ಶಿಫಾರಸ್ಸು ಮಾಡಬೇಕೆಂದು ಆಗ್ರಹಿಸಿದರು.

ತಹಶೀಲ್ದಾರ್ ಶಂಕರ ಜಿ.ಎಸ್. ಅಧ್ಯಕ್ಷತೆ ವಹಿಸಿ ಮಾತನಾಡಿ, ಕೇವಲ ಬಟ್ಟೆಗಳನ್ನು ಮಡಿ ಮಾಡಿ, ಶುದ್ಧಿಗೊಳಿಸುವುದಷ್ಟೇ ಅಲ್ಲ, ಮನಸ್ಸುಗಳನ್ನೂ ಮಡಿ ಮಾಡಿ ಶುದ್ಧ ಮಾಡುವ ಪ್ರಾಮಾಣಿಕ ಕಾಯಕವನ್ನು ಮಡಿವಾಳ ಸಮಾಜದವರು ಮಾಡುತ್ತಿದ್ದಾರೆ. ಜನಾಂಗದವರು ಎಲ್ಲಾ ಹಂತದಲ್ಲೂ ಮುಂದೆ ಬರಬೇಕಾದರೆ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದರ ಮೂಲಕ ಸ್ವಾವಲಂಬಿಗಳಾಗಿ ಬಾಳಬೇಕು ಎಂದರು.

ಜಿ.ಪಂ. ಸದಸ್ಯ ಶಿವಾನಂದ ಕನ್ನಪ್ಪಳವರ, ಕ್ಷೇತ್ರ ಶಿಕ್ಷಣಾಧಿಕಾರಿ ಗುರುಪ್ರಸಾದ್ ತಾ.ಪಂ.ನ ಸನಿ ಅಶೋಕ ನಾರಜ್ಜಿ, ಅರುಣ ಕಾರ್ಗಿ, ಎ.ಬಿ. ಚಂದ್ರಶೇಖರ, ತಾಲ್ಲೂಕು ಅಧ್ಯಕ್ಷ ಮಂಜುನಾಥ ಬಸಪ್ಪ ಮಡಿವಾಳರ, ನಗರಾಧ್ಯಕ್ಷ ರಾಜು ಮಡಿವಾಳರ, ಟ್ರಸ್ಟ್ ಅಧ್ಯಕ್ಷ ಚಂದ್ರಣ್ಣ ಚಳಗೇರಿ, ವೀರಣ್ಣ ದೊಡ್ಡಮನಿ, ಡಿಳ್ಳೆಪ್ಪ ಮಡಿವಾಳರ, ಅಶೋಕ ಮಡಿವಾಳರ, ಈರಪ್ಪ ಮಡಿವಾಳರ, ಎಂ. ಚಿರಂಜೀವಿ, ಹನುಮಂತಪ್ಪ ಮಡಿವಾಳರ, ಮಾಲತೇಶ ಮಡಿವಾಳರ, ಗುಡ್ಡಪ್ಪ ಮಡಿವಾಳರ, ನಾಗರಾಜ ಮಡಿವಾಳರ, ಮಧು ಮಡಿವಾಳರ, ಶಾರದಾ ಮಡಿವಾಳರ, ಚಂದ್ರಶೇಖರ ಮಡಿವಾಳರ, ಪ್ರವೀಣ ಸಾಗರ, ರುದ್ರವ್ವ ಮಡಿವಾಳರ, ಜುಂಜಪ್ಪ ಮಡಿವಾಳರ, ಕಸ್ತೂರಿ ಮಡಿವಾಳರ, ಸುರೇಶ ಮಡಿವಾಳರ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಪೋಲಿಯೋ...



ಪೋಲಿಯೋ ಹಾಕಿಸಿ
ಸರ್ಕಾರದ ಈ ನುಡಿ
ಎಲ್ಲರೂ ತಪ್ಪದೇ ಪಾಲಿಸಿ...

ಪೋಲಿಯೋ ನಿರ್ಮೂಲನವಾದ
ಈ ದೇಶ
ಇದುವೆ ನಮ್ಮ ಭಾರತ ದೇಶ.

0-5 ವರ್ಷದ ಮಕ್ಕಳಿಗೆ ಮಾತ್ರ
ಎರಡು ಹನಿ ಪೋಲಿಯೋ ಹಾಕಿಸಿ
ಅಂಗವಿಕಲತೆಯನ್ನು ಹೋಗಲಾಡಿಸಿ.

ವಿಟಮಿನ್ 'ಎ' ಹಾಕಿಸಿರಿ.
ಮಕ್ಕಳಲ್ಲಿ ಅಂಧತ್ವ ನಿವಾರಣೆಯನ್ನು
ಹೋಗಲಾಡಿಸಿರಿ.
6 ತಿಂಗಳಿಗೊಮ್ಮೆ ಮಾತ್ರ
ಇದನ್ನು ಹಾಕಿಸುವಲ್ಲಿ ಮರೆಯದಿರಿ.

**- ಎ.ಎಂ. ಮಂಜುಳ**
ಅಂಗನವಾಡಿ ಕಾರ್ಯಕರ್ತೆ
ಬಸವರಾಜಪೇಟೆ 'ಬಿ' ಕೇಂದ್ರ,
ದಾವಣಗೆರೆ. ಮೊ. 9901154405

## ರೌಡಿ ಪಟ್ಟಿದಿಂದ ವಿಮುಕ್ತಿ

**(1ನೇ ಪುಟದಿಂದ)** 15 ವರ್ಷಕ್ಕಿಂತ ಮೇಲ್ಪಟ್ಟ ಪ್ರಕರಣಗಳ ಆರೋಪಿಗಳ ಸನ್ನಡತೆಯನ್ನು ಪರಿಶೀಲಿಸಿ ಹಾಗೂ ಸಮಾಜದಲ್ಲಿ ಅವರ ನಡವಳಿಕೆ ಗುರುತಿಸಿ ನ್ಯಾಯಾಲಯದಲ್ಲಿದ್ದ ಪ್ರಕರಣಗಳಿಂದ ಬಿಡುಗಡೆಗೊಂಡಿರುವ ಬಗ್ಗೆ ಖಾತ್ರಿ ಮಾಡಿಕೊಂಡು ಗೂಂಡಾ ಪಟ್ಟಿಯಿಂದ ಅಂತಹವರ ಹೆಸರುಗಳನ್ನು ಕೈಬಿಡಲಾಗುವುದು ಎಂದರು.

ಹರಪನಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಪ್ರಕಾಶ, ಚಿಗಟೇರಿ ಠಾಣೆ ನಾಗರಾಜ, ಅರಸಿಕೆರೆ ಠಾಣೆ ನಾಗರತ್ನ, ಸಿಬ್ಬಂದಿಗಳಾದ ಕೊಟ್ರೇಶ್, ನಾಗರಾಜ, ರವಿಕುಮಾರ. ಗುರುರಾಜ ಇನ್ನಿತರರು ಹಾಜರಿದ್ದರು.

## ನಗರದಲ್ಲಿ ಇಂದು ಸಂಧ್ಯಾವಂದನೆ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಇದೇ ದಿನಾಂಕ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

# ಪೀಡನೆ ನಿಲ್ಲದೆ ಮಾತುಕತೆ ಇಲ್ಲ

**(1ನೇ ಪುಟದಿಂದ)** ನರಮೇಧ ನಡೆಸಲು ಮೋದಿ ಸಂಚು ನಡೆಸಿದ್ದಾರೆ ಎಂದು ಗಾಳಿ ಸುದ್ದಿ ಹರಡುತ್ತಿದ್ದ 250ಕ್ಕೂ ಹೆಚ್ಚು ಟ್ವಿಟ್ಟರ್ ಖಾತೆಗಳನ್ನು ಸೋಮವಾರ ತಡೆಯಲಾಗಿತ್ತು. ಪ್ರಚೋದನಕಾರಿ ಹಾಗೂ ಸುಳ್ಳು ಸುದ್ದಿಯನ್ನು ಹರಡುತ್ತಿರುವುದನ್ನು ತಡೆಯಲು ಕೇಂದ್ರ ಸರ್ಕಾರ ನೀಡಿದ ಸೂಚನೆಯ ಅನ್ವಯ ಟ್ವಿಟ್ಟರ್ ಖಾತೆಗಳನ್ನು ತಡೆದಿತ್ತು.

ವಿವಿಧ ರಾಜ್ಯಗಳಿಂದ ಪ್ರತಿಭಟನಾ ನಿರತ ರೈತರಿಗೆ ಬೆಂಬಲ ಬರುತ್ತಿರುವುದನ್ನು ನೋಡಿದ ಸರ್ಕಾರ ಅತಿಯಾಗಿ ಹೆದರಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ.

ಪಂಜಾಬ್, ಹರಿಯಾಣ ಹಾಗೂ ಉತ್ತರ ಪ್ರದೇಶಗಳ ರೈತರು ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಎರಡು ತಿಂಗಳಿನಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಇದರಿಂದಾಗಿ ಈ ರಾಜ್ಯಗಳು ರಾಜಧಾನಿ ಜೊತೆ ಹೊಂದಿರುವ ಹೆದ್ದಾರಿ ಸಂಚಾರದ ಮೇಲೆ ಪರಿಣಾಮವಾಗುತ್ತಿದೆ.

ಪೊಲೀಸ್ ಹಾಗೂ ಆಡಳಿತ ರೈತರ ಹೋರಾಟಕ್ಕೆ ಹಲವಾರು ರೀತಿಯ ಅಡ್ಡಿ ಹೇರುತ್ತಿರುವುದನ್ನು ನಿಲ್ಲಿಸುವವರೆಗೂ ಸರ್ಕಾರದ ಜೊತೆ ಔಪಚಾರಿಕ ಮಾತುಕತೆ ನಡೆಸಬಾರದು ಎಂದು ಸೋಮವಾರ ನಡೆದ ಮೋರ್ಚಾ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ.

ಅಕ್ರಮವಾಗಿ ಪೊಲೀಸ್ ಕಸ್ಟಡಿಯಲ್ಲಿರುವ ರೈತರನ್ನು ಬೇಷರತ್ತಾಗಿ ಬಿಡುಗಡೆ ಮಾಡಿದ ನಂತರವೇ ಮಾತುಕತೆ ಸಾಧ್ಯ ಎಂದೂ ಹೇಳಿಕೆಯಲ್ಲಿ ತಿಳಿಲಾಗಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು 18 ತಿಂಗಳ ಕಾಲ ತಡೆಯುವ ಪ್ರಸ್ತಾವನೆ ಈಗಲೂ ಇದೆ. ಒಂದು ದೂರವಾಣಿ ಕರೆ ಮೂಲಕ ಮಾತುಕತೆ ಆರಂಭಿಸಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು.

ಕೇಂದ್ರ ಸರ್ಕಾರ ಹಾಗೂ ರೈತರ ನಡುವೆ ಹತ್ತು ಸುತ್ತಿನ ಮಾತುಕತೆಗಳಾಗಿವೆ. ಆದರೆ, ಮುಂದಿನ ಸುತ್ತಿನ ಮಾತುಕತೆಗೆ ದಿನಾಂಕ ಇನ್ನೂ ನಿಗದಿಯಾಗಿಲ್ಲ. ರೈತ ಸಂಘಟನೆಗಳು ತನ್ನ ಪ್ರಸ್ತಾವನೆಗೆ ಚರ್ಚಿಸಲು ಸಮ್ಮತಿಸಿದರೆ ಮಾತ್ರ ಮಾತುಕತೆಗೆ ಬರುವುದಾಗಿ ಸರ್ಕಾರ ಹೇಳಿದೆ.

ಗಣರಾಜ್ಯೋತ್ಸವದ ದಿನ ನಡೆಸಲಾದ ಟ್ರ್ಯಾಕ್ಟರ್ ಪರೇಡ್‌ನಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು. ನಂತರ 122 ಪ್ರತಿಭಟನಾಕಾರರನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಬಂಧನವನ್ನು ಖಂಡಿಸುವುದಾಗಿ ಹೇಳಿರುವ ಮೋರ್ಚಾ, ಹಲವಾರು ಜನರು ಕಣ್ಮರೆಯಾಗಿರುವ ವರದಿಗಳು ಬಂದಿವೆ. ಇದು ನಮಗೆ ಅಪಾರ ಕಳವಳ ತಂದಿದೆ ಎಂದು ಹೇಳಿದೆ.

### ಬಂಧಿತರ ಬಿಡುಗಡೆಗೆ ನಕಾರ

**(1ನೇ ಪುಟದಿಂದ) ಕಾನೂನು ಪದವೀಧರ ಹರ್ಮಾನ್ ಪ್ರೀತ್ ಸಿಂಗ್ ಅರ್ಜಿ ದಾಖಲಿಸಿದ್ದು, 200ಕ್ಕೂ ಹೆಚ್ಚು ಜನರನ್ನು ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದೆ ಎಂದು ಹೇಳಿದ್ದರು. ಆದರೆ, ಇದು ಪ್ರಚಾರಕ್ಕಾಗಿ ದಾಖಲಿಸಿರುವ ಅರ್ಜಿಯಂತಿದೆ ಎಂದು ನ್ಯಾಯಾಲಯ ತಳ್ಳಿ ಹಾಕಿದೆ.**

### ಕೇಂದ್ರಕ್ಕೆ ರಾಹುಲ್ ತರಾಟೆ

**(1ನೇ ಪುಟದಿಂದ)** ತಡೆಯಲಾಗುತ್ತಿದೆ. ದೆಹಲಿ - ಹರಿಯಾಣ ಗಡಿಯಲ್ಲಿ ತಾತ್ಕಾಲಿಕ ಸಿಮೆಂಟ್ ಗೋಡೆಯನ್ನೇ ನಿರ್ಮಿಸಲಾಗಿದೆ. ದೆಹಲಿ - ಉತ್ತರ ಪ್ರದೇಶ ಗಡಿಯ ಘಾಜಿಪುರದಲ್ಲಿ ಬಹು ಹಂತದ ಬ್ಯಾರಿಕೇಡ್‌ಗಳ ಮೂಲಕ ರಸ್ತೆ ಸಂಚಾರ ತಡೆಯಲಾಗಿದೆ.

# ಪುರೋಹಿತ ಕಾರ್ಯದ ಇತಿಹಾಸ, ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವಾಗಲಿ

**ಮೃತ್ಯುಂಜಯ ಪಾಟೀಲ್**



ಹೊನ್ನಾಳಿಯಲ್ಲಿ ನಡೆದ ಅಖಿಲ ಕರ್ನಾಟಕ ವೀರಶೈವ ಪುರೋಹಿತ ಮಹಾಸಭಾದ ಅಧಿವೇಶನದಲ್ಲಿ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ

ಹೊನ್ನಾಳಿ ಫೆ.2 - ಪುರೋಹಿತ ಕಾರ್ಯದ ಭವ್ಯ ಪರಂಪರೆ ಉಳಿಸಿ - ಬೆಳೆಸಿಕೊಂಡು ಹೋಗುವಂತೆ ಮಾಡುವುದೇ ಇಂದಿನ ಪ್ರಥಮ ಅಧಿವೇಶನದ ಮುಖ್ಯ ಕಾರ್ಯವಾಗಬೇಕಿದೆ ಎಂದು ಹೊನ್ನಾಳಿಯ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅಖಿಲ ಕರ್ನಾಟಕ ವೀರಶೈವ ಪುರೋಹಿತ ಮಹಾಸಭಾದ ವತಿಯಿಂದ ಇಲ್ಲಿನ ಹಿರೇಕಲ್ಮಠದಲ್ಲಿ ಮಂಗಳವಾರ ನಡೆದ ಪ್ರಥಮ ಅಧಿವೇಶನ ಹಾಗೂ ವೀರಶೈವ ಷೋಡಶ ಸಂಸ್ಕಾರಗಳ ವಿಚಾರ ಸಂಕಿರಣದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಉತ್ತಮ ಭಾಷೆಯ ಅರಿವಿನಿಂದ ಮಂತ್ರಗಳ ಅರ್ಥ, ನೈಜತೆಯನ್ನು ಪುರೋಹಿತರು ಅರಿಯಲು ಸಾಧ್ಯ. ಪುರವನ್ನು ಪುರೋಹಿತರು ಕಾಪಾಡಿದರೆ-ಪುರೋಹಿತರ ಹಿತ ಕಾಪಾಡುವವರಾರು? ಎಂಬುದು ಚರ್ಚಿತ ವಿಷಯವಾಗಬೇಕು ಎಂದು ಶ್ರೀಗಳು ಹೇಳಿದರು.

ಮಾಜಿ ಶಾಸಕ ಶಾಂತನ ಗೌಡರು ಸಮಾರಂಭವನ್ನು ಉದ್ದೇಶಿಸಿ ಮಾತನಾಡಿ, ಪುರೋಹಿತರನ್ನು ಕೇಳಿ ಮುಂದಿನ ಸಭೆಗಳನ್ನು ನಿಶ್ಚಯಿಸುವ ಜೊತೆಗೆ ಜನತೆಗೆ ನೀವೇ ಮಾರ್ಗದರ್ಶನ ನೀಡಿರಿ. ವಾಸ್ತುವಿನ ನೆಪಗಳ, ಹೆಸರು ಬದಲಾಯಿಸುವ ಪರಿಪಾಠಗಳ, ಆಹಾರ ಪದಾರ್ಥವಾದ ಅಕ್ಕಿಯನ್ನು ಅಕ್ಷತೆಯ ನೆಪದಲ್ಲಿ ಕಾಲಿನಲ್ಲಿ ತುಳಿಯದಂತೆ ಮಾಡುವ ಕೆಲವೊಂದು ಸುಧಾರಣೆ ನಿಮ್ಮಿಂದ ಸಾಧ್ಯವಿದ್ದು ಈ ಕಾರ್ಯಕ್ಕೆ ಮುಂದಾಗಿರೆಂದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಪುರೋಹಿತ ಕಾರ್ಯವು ಇತರರನ್ನು ದೇವರಿಗೆ ಮುಟ್ಟಿಸುವ ಸಾಕ್ಷಾತ್ಕಾರದ ಕೈಂಕರ್ಯವಾಗಿದೆ. ನಿಮಗೆ ಗಂಡು ಮಗುವಾಗುವ ಭವಿಷ್ಯವಿದೆ ಎಂದು ಮನೆ ಮುರಿಯುವಂತಹ ಕೆಲಸಗಳು ಆಗುತ್ತಿರುವುದನ್ನು ಅರಿತಿದ್ದೇವೆ.

ಜೋತಿಷ್ಯ ಶಾಸ್ತ್ರವು ಗ್ರಹಗಳ ಸಂಚಾರದ ನಿಯಮವನ್ನು ಹೊಂದಿರುವುದು ತಿಳಿದ ವಿಷಯವೇ ಆಗಿದೆ. ನಮಗೂ ಸಾಡೇಸಾತ್ ಇದೆ ಎಂದು ಹೇಳಿ ಇಂತಹ ಪೂಜೆ ಮಾಡಿ ಎಂದಿದ್ದರು. ವಿಧಿಯಿಲ್ಲದೇ ನಾವು ಹೇಳುವ ಪೂಜೆಗಳನ್ನು ಮಾಡಿಸಲು ಮುಂದಾಗುತ್ತೇವೆ. ತಿಳಿದಿರುವ ಪುರೋಹಿತರು ತಿಳಿಯದವರಿಗೆ ತಿಳಿಸುವ ಕಾರ್ಯ ಈ ಅಧಿವೇಶನದಲ್ಲಿ ಆಗಲಿ ಎಂದು ಹಾರೈಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮಾತನಾಡಿ, ಪುರೋಹಿತ ಕಾರ್ಯಗಳಲ್ಲಿ ಬದಲಾವಣೆಗಳು ಬೇಕು. ನಾವು ಹೆಚ್ಚು ಬಸವ ತತ್ವದ ಸಭೆಗಳಿಗೆ ಭಾಗವಹಿಸಿದ್ದರಿಂದ ಅಕ್ಕಿಗಳ ಬದಲು ಹೂಗಳನ್ನು ಬಳಸಿದ್ದನ್ನು ಕಂಡಿದ್ದೇನೆ. ಶ್ರೀಮಂತ ಸಂಸ್ಕೃತಿ ಎಂದುಕೊಳ್ಳುವ ನಾವು ಪುರೋಹಿತ ಪದ್ಧತಿಯ ವೈಜ್ಞಾನಿಕತೆ ಅರಿತು ತಿದ್ದಿಕೊಂಡು ಹೋಗುವಂತಿದ್ದರೆ ಒಳಿತಾಗಲಿದೆ ಎಂದರು.

ಹೊಟ್ಯಾಪುರ ಮಠದ ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ರಾಂಪುರ ಮಠದ ಸದ್ಗುರು ಶಿವಕುಮಾರ ಹಾಲಸ್ವಾಮೀಜಿ ನೇತೃತ್ವ ವಹಿಸಿದ್ದರು. ಅಧ್ಯಕ್ಷತೆಯನ್ನು ಅಖಿಲ ಕರ್ನಾಟಕ ವೀರಶೈವ ಪುರೋಹಿತ ಮಹಾಸಭಾದ ರಾಜ್ಯಾಧ್ಯಕ್ಷ ಚನ್ನೇಶ ಶಾಸ್ತ್ರಿ ಮಠದ್ ವಹಿಸಿದ್ದರು.

ಸಭೆಯಲ್ಲಿ ರಾಜ್ಯ ಸರ್ಕಾರದ ಕೊಳಗೇರಿ ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಗೀತಾ ರವೀಂದ್ರ, ಜೆಡಿಎಸ್ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಎಂ.ಪಿ.ರಮೇಶ್ ಮಾತನಾಡಿದರು.

ವೀರಶೈವ ಷೋಡಶ ಸಂಸ್ಕಾರಗಳ ಬಗ್ಗೆ ವಿಚಾರ ಸಂಕಿರಣ ಭಾಗ-1 ಕಾರ್ಯಕ್ರಮದಲ್ಲಿ ಗರ್ಭದಾನ ವಿಷಯದ ಬಗ್ಗೆ ತುಮಕೂರಿನ ಕೆ.ಎಸ್.ವೀರಪ್ಪ ದೇವರು, ಪುಂಸವನ ವಿಷಯವಾಗಿ ಹಿರೇಕೆರೂರು ಚನ್ನೇಶಶಾಸ್ತ್ರಿ ಮಠದ ಹಾಗೂ ಸೀಮಂತೋನ್ನಯನ (ಗರ್ಭಲಿಂಗಧಾರಣೆ) ವಿಷಯದ ಮೇಲೆ ಕಡೂರು ತಾಲ್ಲೂಕು ಯಗಟಿ ಶಿವಲಿಂಗಸ್ವಾಮಿ ವಿಚಾರ ಮಂಡಿಸಿದರು.

ಸಭೆಯಲ್ಲಿ ಡಿವೈಎಸ್ ಪಿ ಪ್ರಶಾಂತ್ ಮುನ್ನೋಳಿ, ಕೆ.ಜಿ. ಮಹದೇವ ಸ್ವಾಮಿ, ನಾಗರಾಜ್ ಶಾಸ್ತ್ರಿ ಎಂ.ಎಸ್.ಶಾಸ್ತ್ರಿ ಹೊಳೆಮಠ, ಅನ್ನದಾನಯ್ಯ ಶಾಸ್ತ್ರಿ, ಹಿರಿಯ ಶಾಸ್ತ್ರಿಗಳಾದ ರುದ್ರರಾಧ್ಯ, ಶಿವಲಿಂಗಾರಾಧ್ಯರನ್ನು ಸನ್ಮಾನಿಸಲಾಯಿತು.

## ವಾಸ್ತವಿಕತೆಯಿಂದ ದೂರ ಉಳಿದ ಬಜೆಟ್

ಕೇಂದ್ರ ಸರ್ಕಾರವು ಈ ವರ್ಷವೂ ಯಥಾ ಪ್ರಕಾರ ವಾಸ್ತವಿಕತೆಯಿಂದ ದೂರವಿರುವ ಕಾಲ್ಪನಿಕವಾದ ಬಜೆಟ್ಟನ್ನು ದೇಶದ ಜನರಿಗೆ ನೀಡಿದೆ. ಕೊರೊನಾ ಸಾಂಕ್ರಾಮಿಕ ರೋಗದಿಂದ ನಲುಗಿರುವ ದೇಶಕ್ಕೆ ಮತ್ತು ದೇಶವಾಸಿಗಳಿಗೆ ಈ ಬಾರಿಯಾದರೂ ಅತ್ಯಂತ ಜನಪ್ರಿ ಯವಾದ ಕೊಡುಗೆಗಳನ್ನು ನೀಡುವುದರ ಮೂಲಕ ಅವರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಲು ಪ್ರಯತ್ನಿಸ ಬಹುದಿತ್ತು. ಆದರೆ ರೈತರು, ಕಾರ್ಮಿಕರು ಹಾಗೂ ಜನಸಾಮಾನ್ಯರೆಡೆಗೆ ಅತ್ಯಂತ ಸಂವೇದನಾರಹಿತವಾದ ಸರಕಾರದ ಧೋರಣೆ ಮುಂದುವರೆದಿದೆ.

ಕೋಟ್ಯಾಂತರ ಸಂಖ್ಯೆಯಲ್ಲಿ ಉದ್ಯೋಗಗಳು ನಾಶವಾಗಿವೆ. ವಿದ್ಯಾವಂತ ಯುವಕರು ಬೀದಿಗೆ ಬಿದ್ದಿದ್ದಾರೆ. ಆದರೆ ಉದ್ಯೋಗ ಸೃಷ್ಠಿಗಾಗಿ ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯೆಂಬಂತೆ ಕೆಲವೇ ಕೆಲವು ಸಣ್ಣಪುಟ್ಟ ಘೋಷಣೆಗಳನ್ನು ಹೊರತುಪಡಿಸಿದರೆ, ಅತ್ಯಗತ್ಯವಾದ ಯಾವುದೇ ದೊಡ್ಡ ಯೋಜನೆಗಳನ್ನು ಪ್ರಕಟಿಸದಿರುವುದು ಅತ್ಯಂತ ದೊಡ್ಡ ಸಂಖ್ಯೆಯಲ್ಲಿರುವ ಯುವ ಸಮುದಾಯಕ್ಕೆ ಅನ್ಯಾಯವಾಗಿದೆ.



ವಿಮಾ ಕ್ಷೇತ್ರಕ್ಕೆ ಶೇ. 74 ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಕಲ್ಪಿಸಿರುವುದು, ಜೀವ ವಿಮಾ ನಿಗಮದ ಷೇರು ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖಾಸಗಿ ಯವರಿಗೆ ಮಾರುವ ಪ್ರಸ್ತಾಪ ಸರಿಯಿಲ್ಲ. ಹಾಗೆಯೇ 2 ಸರಕಾರಿ ಸ್ವಾಮ್ಯದ ಬ್ಯಾಂಕುಗಳು, 1 ಸಾಮಾನ್ಯ ವಿಮಾ ಸಂಸ್ಥೆಯನ್ನು ಖಾಸಗಿಕರಣ ಗೊಳಿಸುವುದು ಅತ್ಯಂತ ದೇಶ ವಿರೋಧಿ ಕ್ರಮವಾಗಿದೆ. ಇವೆಲ್ಲವುಗಳನ್ನು ಹಣಕಾಸು ಸಚಿವರು ಮರು ಪರಿಶೀಲನೆ ಮಾಡಬೇಕು. ಇಲ್ಲದಿದ್ದಲ್ಲಿ ಈ ಸರಕಾರ ರಾಷ್ಟ್ರೀಕರಣ ನೀತಿಯ ವಿರುದ್ಧವಿರುವುದು ಸ್ಪಷ್ಟವಾಗುತ್ತದೆ. ಸರಕಾರದ ಈ ಕೆಟ್ಟ ನೀತಿಗಳ ವಿರುದ್ಧ ಮುಂದಿನ ದಿನಗಳಲ್ಲಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ ಜನಾಂದೋಲನವನ್ನು ರೂಪಿಸಲಿದೆ.

**- ಕೆ.ರಾಘವೇಂದ್ರ ನಾಯರಿ,**
ಬ್ಯಾಂಕ್ ಉದ್ಯೋಗಿಗಳ ಸಂಘದ ಮುಖಂಡರು.
ಮೊ: 9844314543

## ನಗರದ ಶಿವಯೋಗಾಶ್ರಮದಲ್ಲಿ ಇಂದು ಶರಣ ಸಂಗಮ

ಬಸವ ಕೇಂದ್ರ ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ಇವರ ಆಶ್ರಯದಲ್ಲಿ 'ಕೆರಳುವಿಕೆ ಮತ್ತು ಸಮತೋಲನ' ವಿಷಯ ಕುರಿತು ಶರಣ ಸಂಗಮ ಕಾರ್ಯಕ್ರಮವು ಇಂದು ಸಂಜೆ 6.30 ಕ್ಕೆ ಶಿವಯೋಗಾಶ್ರಮದಲ್ಲಿರುವ ಬಸವ ಕೇಂದ್ರದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ವಹಿಸುವರು. ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಎಸ್.ಟಿ. ವೀರೇಶ್, ಜಿ.ಎಂ. ಗೋವಿಂದರಾಜು ಶ್ರೀಮತಿ ಎಂ.ಎಸ್. ಸುಷ್ಮಾ ಆಗಮಿಸುವರು. ಡಾ. ಅನಿತಾ ಹೆಚ್. ದೊಡ್ಡಗೌಡರ್ ಉಪನ್ಯಾಸ ನೀಡುವರು.

### ಕಾರ್ಮಿಕ ವಿರೋಧಿ ತಿದ್ದುಪಡಿ ಕೈಬಿಡಲು ಆಗ್ರಹ

## ನಗರಕ್ಕಾಗಮಿಸಿದ ಪ್ರಚಾರ ಜಾಥಾ

ದಾವಣಗೆರೆ, ಫೆ.2- ಮೂರು ಕೃಷಿ ಕಾಯ್ದೆಗಳನ್ನು ರದ್ದು ಪಡಿಸಬೇಕು, ಕಾರ್ಮಿಕ ವಿರೋಧಿ ತಿದ್ದುಪಡಿ ಕೈಬಿಡಬೇಕೆಂದು ಒತ್ತಾಯಿಸಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಪ್ರಚಾರ ಜಾಥಾ ಇಂದು ನಗರಕ್ಕಾಗಮಿಸಿತು.

ಕರ್ನಾಟಕ ಪ್ರಾಂತ ರೈತ ಸಂಘ, ಸೆಂಟ್ರಲ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಟನೆ, ಭಾರತ ವಿದ್ಯಾರ್ಥಿ ಫೆಡರೇಷನ್, ಅಖಿಲ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್, ದಲಿತ ಹಕ್ಕುಗಳ ಸಮಿತಿಯಿಂದ ಹಮ್ಮಿಕೊಂಡಿರುವ ಜಾಥಾ ಆಗಮನದ ಹಿನ್ನೆಲೆಯಲ್ಲಿ ನಗರ ಪಾಲಿಕೆ ಕಚೇರಿ ಎದುರು ಏರ್ಪಡಿಸಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದ ಕೆಪಿಆರ್‌ಎಸ್ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ್, ಕೇಂದ್ರ ಸರ್ಕಾರ ಸಂಸತ್ತಿನಲ್ಲಿ 2020ರಲ್ಲಿ ಅಂಗೀಕರಿಸಿರುವ ತ್ರಿವಳಿ ಕೃಷಿ ಕಾಯ್ದೆಗಳನ್ನು, ಉದ್ದೇಶಿತ ವಿದ್ಯುತ್ ಮಸೂದೆ ರದ್ದುಪಡಿಸಬೇಕು. 29 ಕಾರ್ಮಿಕ ಕಾನೂನುಗಳನ್ನು ರದ್ದು ಮಾಡಿ, ಅಂಗೀಕರಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದು ಪಡಿಸಬೇಕು. ಕೋವಿಡ್-19 ನಿಯಂತ್ರಣಕ್ಕಾಗಿ ಘೋಷಿಸಿದ್ದ ಲಾಕ್‌ಡೌನ್‌ನಿಂದ ಹಳಿ ತಪ್ಪಿರುವ ಆರ್ಥಿಕತೆಯ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ನೌಕರರ ಒಕ್ಕೂಟದ ಆರ್.ಎಸ್.ಬಸವರಾಜ, ದೇವದಾಸಿ ವಿಮೋಚನಾ ಸಂಘದ ಮಾಳಮ್ಮ, ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಎಚ್.ಆನಂದರಾಜ್, ಎಸ್‌ಎಫ್‌ಐನ ಅನಂತರಾಜ್, ಕಟ್ಟಡ ಕಾರ್ಮಿಕರ ಸಂಘಟನೆಯ ಗುಡ್ಡಪ್ಪ, ತಿಮ್ಮಣ್ಣ, ಬೀದಿಬದಿ ವ್ಯಾಪಾರಿಗಳ ಸಂಘದ ಜಯಪ್ಪ ಎಂ.ಎಚ್, ಎಆರ್‌ಡಿಯು ಜಿಲ್ಲಾ ಸಂಚಾಲಕ ಶ್ರೀನಿವಾಸಮೂರ್ತಿ ಸೇರಿದಂತೆ ಇತರರು ಇದ್ದರು.

### ನಿವೃತ್ತ ಮುನಿಸಿಪಲ್ ದಫೇದಾರ್ ಮಾಯಕೊಂಡದ ಅಬ್ದುಲ್ ಘನಿ ನಿಧನ



ದಾವಣಗೆರೆ ಭಗತ್‌ಸಿಂಗ್ ನಗರ, 4ನೇ ಕ್ರಾಸ್ ವಾಸಿ, ನಿವೃತ್ತ ಮುನ್ಸಿಪಲ್ ದಫೇದಾರ್ (ಬಿಲ್ ಕಲೆಕ್ಟರ್) ಮಾಯಕೊಂಡದ ಜನಾಬ್ ಅಲ್‌ಹಜ್ ಅಬ್ದುಲ್ ಘನಿ (85) ಅವರು ದಿನಾಂಕ 2.02.2021ರ ಮಂಗಳವಾರ ಸಂಜೆ 4.30ಕ್ಕೆ ನಿಧನರಾದರು. ಮೃತರ ಅಂತ್ಯಕ್ರಿಯೆಯು ದಿನಾಂಕ 3.02.2021ರ ಬುಧವಾರ ಮಧ್ಯಾಹ್ನ 12.30ಕ್ಕೆ ನಗರದ ಪಿ.ಬಿ. ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

## ಮಲೇಬೆನ್ನೂರಿನ ಚಾನಲ್‌ನಲ್ಲಿ ಅಪರಿಚಿತ ಪುರುಷನ ಶವ ಪತ್ತೆ

ಮಲೇಬೆನ್ನೂರು, ಫೆ.2- ಬಸವಾಪಟ್ಟಣ ವ್ಯಾಪ್ತಿಯ 8ನೇ ಜೋನ್ ಚಾನಲ್‌ನಲ್ಲಿ ಎರೆಬೂದಿಹಾಳ್ ಗ್ರಾಮದ ಹನುಮಂತಗೌಡ್ರು ಎಂಬುವವರ ಜಮೀನಿನ ಮುಂಭಾಗದ ಚಾನಲ್ ನೀರಿನಲ್ಲಿ ಅಪರಿಚಿತ ಪುರುಷನ ಶವ ಪತ್ತೆಯಾಗಿದ್ದು, ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಮಾರು 60-65 ವರ್ಷದ ಅಪರಿಚಿತ ಪುರುಷನ ಶವ ನೀರಿನಲ್ಲಿ ತೇಲುತ್ತಾ ಬಂದಿದೆ. ದುಂಡು ಮುಖ, ದೃಢಕಾಯ ಶರೀರ ಹೊಂದಿದ್ದು, ಮುಖವು ನೀರಿನ ರಭಸಕ್ಕೆ ಸಿಲುಕಿ ಗುರುತು ಸಿಗದಂತಿರುತ್ತದೆ. ವಿವರಕ್ಕೆ ಜಿಲ್ಲಾ ಕಂಟ್ರೋಲ್ ರೂಂ-08192-253100, ಮಲೇಬೆನ್ನೂರು ಪೊಲೀಸ್ ಠಾಣೆ: 08192-268758ರಲ್ಲಿ ಸಂಪರ್ಕಿಸಬಹುದು.

## ಹರಿಹರದ ವಸತಿ ಗೃಹದಲ್ಲಿ ದಾವಣಗೆರೆ ವ್ಯಕ್ತಿಯ ಆತ್ಮಹತ್ಯೆ

ಹರಿಹರ, ಫೆ.2- ನಗರದ ನಿಖಿತಾ ಲಾಡ್ಜ್‌ನಲ್ಲಿ ದಾವಣಗೆರೆ ನಿಟುವಳ್ಳಿ ವಾಸಿ ಎನ್ನಲಾದ ಚಂದ್ರಶೇಖರ್ (45) ಎಂಬಾತ ನಿನ್ನೆ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಸಾಲದ ಬಾಧೆ ತಡೆಯಲಾರದೆ ಆತ್ಮಹತ್ಯೆಗೆ ಶರಣಾಗಿದ್ದೇನೆ ಎಂದು ಡೆತ್ ನೋಟ್ ಬರೆದಿಟ್ಟಿರುವ ಆತ, ಎರಡು ದಿನಗಳ ಹಿಂದೆ ಲಾಡ್ಜಿನಲ್ಲಿ ರೂಂ ಮಾಡಿದ್ದಾನೆ ಎಂದು ಹೇಳಲಾಗಿದೆ. ಪ್ರಕರಣ ನಗರ ಠಾಣೆಯಲ್ಲಿ ದಾಖಲಾಗಿದ್ದು, ಸ್ಥಳಕ್ಕೆ ನಗರ ಠಾಣೆಯ ಪಿಎಸ್‌ಐ ಸುನೀಲ್ ಬಸವರಾಜ್ ತೇಲಿ, ಸಿಬ್ಬಂದಿ ಸತೀಶ್ ಭೇಟಿ ನೀಡಿದ್ದರು.

## ಸಮೂಹ ನೃತ್ಯ-ಗಾಯನಕ್ಕೆ ಆಹ್ವಾನ

ದಾವಣಗೆರೆ, ಫೆ.2- ಜಿಲ್ಲೆ ಸಮಾಚಾರ ಬಳಗದಿಂದ ಸಾರ್ವಜನಿಕವಾಗಿ ಹಿರಿಯರು ಮತ್ತು ಕಿರಿಯರಿಗೆ ಉಚಿತವಾಗಿ ಸಮೂಹ ಗೀತೆ, ಸಮೂಹ ನೃತ್ಯ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಸಂಸ್ಥೆ ಸಂಸ್ಥಾಪಕ ವಿ. ಹನುಮಂತಪ್ಪ ತಿಳಿಸಿದ್ದಾರೆ.

ಆಸಕ್ತರು ವಾಟ್ಸಾಪ್ ನಂ: 9740112249, 990395797 ಹೆಸರು ನೋಂದಾಯಿಸುವುದು. ವಿವರಕ್ಕೆ ಮೊಬೈಲ್ 953873 2777ಕ್ಕೆ ಸಂಪರ್ಕಿಸಲು ಬಳಗದ ಪ್ರಧಾನ ಕಾರ್ಯದರ್ಶಿ ಸಿ.ಕೆ. ಆನಂದತೀರ್ಥಾಚಾರ್, ಸಂಚಾಲಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

# ಬಯಲುಸೀಮೆ ಪ್ರದೇಶಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವ ಗುರಿ



**ರಾಣೇಬೆನ್ನೂರಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ**

ರಾಣೆಬೆನ್ನೂರು, ಫೆ.2- ಮಳೆ ಪ್ರಮಾಣ ಕಡಿಮೆಯಾಗುವ 14 ಜಿಲ್ಲೆಗಳ 57 ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ 70 ವಿಧಾನಸಭಾ ಕ್ಷೇತ್ರಗಳು ಬಯಲು ಸೀಮೆ ಎಂದು ಸರ್ಕಾರ ಗುರುತಿಸಿ ಅಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವ ಸದುದ್ದೇಶವನ್ನು ಹೊಂದಲಾಗಿದ್ದು, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಸ್ಥಾಪಿಸಿ ಚಿತ್ರದುರ್ಗವನ್ನು ಕೇಂದ್ರಸ್ಥಾನವನ್ನಾಗಿಸಿಕೊಂಡು ತನ್ಮೂಲಕ ಅಭಿವೃದ್ಧಿ ಪಡಿಸಲು ಮುಂದಾಗಿದೆ ಎಂದು ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ ಹೇಳಿದರು.

ಮೊನ್ನೆ ಇಲ್ಲಿ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಬಯಲು ಸೀಮೆ ಎಂದು ಸರ್ಕಾರ ಗುರುತಿಸಿರುವ ಬಾಗಲಕೋಟೆ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕೋಲಾರ, ರಾಮನಗರ, ತುಮಕೂರು, ವಿಜಯಪುರ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಮಂಡಳಿಯಿಂದ ಕೈಗೊಂಡ ಕಾಮಗಾರಿಗಳನ್ನು ಪರಿಶೀಲಿಸಿ, ಅಭಿವೃದ್ಧಿ ಕುರಿತು ಸ್ಥಳೀಯ ಅಧಿಕಾರಿಗಳು ಮತ್ತು ಜನಪ್ರತಿನಿಧಿ ಗಳೊಂದಿಗೆ ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲಾಗುವುದು ಎಂದರು.

ರಸ್ತೆಯ ಮೇಲೆ ಹರಿಯುವ ಹಳ್ಳಕ್ಕೆ ಬದು ನಿರ್ಮಾಣ ಮಾಡುವುದು. ಇದರಿಂದ ಸುತ್ತಮುತ್ತಲ ಜಮೀನುಗಳಲ್ಲಿಯ ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಹೆಚ್ಚುವುದರ ಜೊತೆಗೆ ದನ - ಕರುಗಳು ಮತ್ತು ಪ್ರಾಣಿ - ಪಕ್ಷಿಗಳಿಗೆ ಬೇಸಿಗೆಯಲ್ಲಿ ಕುಡಿಯಲು ನೀರಿನ ಸೌಲಭ್ಯವಾಗಲಿದೆ. ಸರ್ಕಾರಿ ಜಮೀನುಗಳಲ್ಲಿ ಚೆಕ್ ಡ್ಯಾಂ, ಸಣ್ಣ ಕೆರೆಗಳ ಬದು ಮತ್ತು ಕೋಡಿ ನಿರ್ಮಾಣ, ಮಳೆ ನೀರು ತಡೆಗೋಡೆ, ಗೋಕಟ್ಟೆ ನಿರ್ಮಾಣ ಮಾಡಲಾಗುವುದು.

ದೊಡ್ಡ ಪ್ರಮಾಣದಲ್ಲಿ ಸರ್ಕಾರಿ ಜಾಗದಲ್ಲಿ ಕಿರು ಕಾಲುವೆಗಳು ಮತ್ತು ಇಂಗು ಗುಂಡಿ ನಿರ್ಮಿಸಿ ಅಂತರ್ಜಲ ಮಟ್ಟ ಹೆಚ್ಚಿಸಲಾಗುವುದು. ಜೊತೆಗೆ ಎಸ್ಸಿ ಮತ್ತು ಎಸ್‌ಟಿ ಸಮುದಾಯಕ್ಕೆ ಸೇರಿದ ವ್ಯಕ್ತಿಗಳನ್ನು ಒಟ್ಟುಗೂಡಿಸಿ ಅರಣ್ಯೀಕರಣ, ತೋಟಗಾರಿಕೆ, ಸಮುದಾಯ ಕೃಷಿ, ಕೊಳವೆ ಬಾವಿಯ ಸಹಾಯದಿಂದ ಹನಿ ನೀರಾವರಿ ಒದಗಿಸಿ ಆರ್ಥಿಕ ಮಟ್ಟ ಹೆಚ್ಚಿಸುವ ಕಾಮಗಾರಿಗಳನ್ನು ಮಾಡಲಾಗುವುದು ಎಂದರು.

ಜಿ.ಪಂ. ಅಧ್ಯಕ್ಷ ಏಕನಾಥ ಭಾನುವಳ್ಳಿ, ಕಾರ್ಯದರ್ಶಿ ಎಸ್.ವೈ. ಬಸವರಾಜಪ್ಪ, ಉಪಕಾರ್ಯದರ್ಶಿ ಕೃಷ್ಣ ನಾಯಕ, ಜಿ.ಪಂ. ಉಪವಿಭಾಗದ ಸಹಾಯಕ ಅಭಿಯಂತರ ರಾಮಣ್ಣ ಬಜಾರಿ, ಡಾ. ಬಸವರಾಜ ಕೇಲಗಾರ, ದೀಪಕ್ ಹರಪನಹಳ್ಳಿ, ರಾಘವೇಂದ್ರ ಕುಲಕರ್ಣಿ ಇನ್ನಿತರರಿದ್ದರು.

# ಬಜೆಟ್‌ನಲ್ಲಿ ಬಹು ದಿನಗಳ ಬೇಡಿಕೆಯತ್ತ ಗಮನ

## ಮಹಾನಗರ ಪಾಲಿಕೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ

ದಾವಣಗೆರೆ, ಫೆ.2- ಮಹಾನಗರ ಪಾಲಿಕೆಯ 2021-22ನೇ ಸಾಲಿನ ಆಯವ್ಯಯ ಮಂಡನೆಗೆ ಸಲಹೆ-ಸೂಚನೆ ನೀಡಲು ಸಾರ್ವಜನಿಕರು, ಸಂಘ- ಸಂಸ್ಥೆಗಳ ಸಭೆಯು ಪಾಲಿಕೆ ಸಭಾಂಗಣದಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆಯಿತು.



ಈ ಸಂದರ್ಭದಲ್ಲಿ ಮಾತನಾಡಿದ ಆಯುಕ್ತರು, ಇದು ಎರಡನೇ ಸಭೆಯಾಗಿದ್ದು, ಶೀಘ್ರವೇ ಸರ್ವ ಸದಸ್ಯರ ಸಭೆ ಕರೆದು ಬಜೆಟ್ ಬಗ್ಗೆ ಚರ್ಚೆ ನಡೆಸಲಾಗುವುದು. ಮಹಾಪೌರರು, ಸದಸ್ಯರ ತೀರ್ಮಾನದ ನಂತರ ಬಜೆಟ್ ಮಂಡನೆ ನಡೆಯಲಿದೆ. ಬಜೆಟ್ ನಲ್ಲಿ ಬಹು ದಿನಗಳ ಬೇಡಿಕೆಗಳ ಬಗ್ಗೆ ಹೆಚ್ಚು ಗಮನ ಹರಿಸಲಾಗುವುದು ಎಂದು ಹೇಳಿದರು.

ಇದಕ್ಕೂ ಮುನ್ನ ರವೀಂದ್ರನಾಥ್ ಬಡಾವಣೆ ಹಿತರಕ್ಷಣಾ ಸಮಿತಿಯ ಸಿದ್ಧರಾಮಪ್ಪ ಅವರು, ಪಾಲಿಕೆ ವ್ಯಾಪ್ತಿಯ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಿ, ದಂಡ ವಸೂಲಿ ಮಾಡುವ ಪ್ರಕ್ರಿಯೆ ತೀವ್ರಗೊಳಿಸಿ ಪಾಲಿಕೆಗೆ ಆದಾಯ ಹೆಚ್ಚಿಸಿಕೊಳ್ಳುವಂತೆ ಸಲಹೆ ನೀಡಿದರು.

ಪಾಲಿಕೆ ಆವರಣದಲ್ಲಿನ ಕ್ಯಾಂಟೀನ್ ಬಳಿ ಕಟ್ಟಡ ಕಟ್ಟಿ ಬಾಡಿಗೆ ಪಡೆಯಬಹುದು. ಬೆಳಗ್ಗೆಯೇ ಆವರಣದಲ್ಲಿ ಪಾರ್ಕ್ ಮಾಡುವ ವಾಹನಗಳಿಂದಲೂ ಹಣ ವಸೂಲಿ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ.ಬಾವಿ, ಪಾಲಿಕೆ ವ್ಯಾಪ್ತಿಯ 45 ವಾರ್ಡ್‌ಗಳಲ್ಲೂ ವಾಚನಾಲಯ ಆರಂಭಿಸುವಂತೆ ಈಗಾಗಲೇ ಮನವಿ ಸಲ್ಲಿಸಲಾಗಿದ್ದು, ಕಾರ್ಯರೂಪಕ್ಕೆ ತರಬೇಕು. ಈ ಮೂಲಕ ಜನರಿಗೂ, ಪತ್ರಿಕೆಗಳಿಗೂ ಅನುಕೂಲ ಮಾಡಿಕೊಡಬೇಕು ಎಂದು ಹೇಳಿದರು.

ಬೆಂಗಳೂರು, ಶಿವಮೊಗ್ಗ ಮಾದರಿಯಂತೆ ನಗರದಲ್ಲೂ ಪಾಲಿಕೆ ವತಿಯಿಂದ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಬೇಕು. ಪಾಲಿಕೆ ಆವರಣದಲ್ಲಿ ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ವೇಳೆ ಉದ್ಘಾಟಿಸಲಾಗಿದ್ದ ಪತ್ರಕರ್ತರ ಭವನವನ್ನು ಪೌರ ಕಾರ್ಮಿಕರ ಸಂಘದಿಂದ ಬಿಡಿಸಿ ಕೊಡಬೇಕು. ಪತ್ರಕರ್ತರ ಭವನಕ್ಕೆ ಸೂಕ್ತ ನಿವೇಶನದ ವ್ಯವಸ್ಥೆ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಅಲ್ಲದೇ, ಕೆಟಿಜೆ ನಗರ 18ನೇ ಕ್ರಾಸ್ ರಸ್ತೆಗೆ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಸ್ಥಾಪಕ ಎಂ.ಎಸ್. ಶಿವಣ್ಣ ಅವರ ಹೆಸರಿಡುವಂತೆ ಮನವಿ ಮಾಡಿ, ಮನವಿ ಪತ್ರವನ್ನು ಪಾಲಿಕೆ ಆಯುಕ್ತರಿಗೆ ಸಲ್ಲಿಸಿದರು. ಆಯುಕ್ತರು ಪಾಲಿಕೆ ಮೇಯರ್ ಹಾಗೂ ಸದಸ್ಯರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ದಲಿತ ಸಂಘರ್ಷ ಸಮಿತಿ ಸ್ಲಂ ಘಟಕದ ಅಧ್ಯಕ್ಷ ನಾಗರಾಜ ಆನೆಕೊಂಡ ಮಾತನಾಡುತ್ತಾ, ಪಾಲಿಕೆಯಿಂದ ಎಸ್ಸಿ-ಎಸ್ಟಿ ಜನಾಂಗಕ್ಕೆ ಮೀಸಲಾದ ಅನುದಾನದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ವೇತನ ಮತ್ತಿತರೆ ಕೆಲಸಗಳಿಗೆ ಹೆಚ್ಚು ವಿನಿಯೋಗಿಸುವಂತೆ ಸಲಹೆ ನೀಡಿದರು. ಅಲ್ಲದೆ ಎಸ್ಸಿ-ಎಸ್ಟಿಗಳಿಗೆ ನೀಡುವ ಕಚ್ಚಾ ಹಾಗೂ ಪಕ್ಕಾ ಮನೆಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಕೋರಿದರು.

ಸ್ಲಂ ಜನಾಂದೋಲನ ಸಮಿತಿಯ ಮಹಿಳಾ ಪ್ರಧಾನ ಕಾರ್ಯದರ್ಶಿ ರೇಣುಕಾ ಯಲ್ಲಮ್ಮ ಮಾತನಾಡುತ್ತಾ, ಬಜೆಟ್‌ನಲ್ಲಿ ಸ್ಲಂಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವಂತೆಯೊ, ಕೊರೊನಾದಿಂದ ಮಹಿಳೆಯರು ಆರ್ಥಿಕ ಸಂಕಷ್ಟದಲ್ಲಿದ್ದು, ಅವರಿಗೆ ಹೊಲಿಗೆ ಯಂತ್ರ ನೀಡುವಂತೆಯೂ ಹೇಳಿದರು.

ಶಿವಕುಮಾರ್ ಅವರು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲು ಲ್ಯಾಪ್ ಟಾಪ್ ನೀಡುವಂತೆ ಹೇಳಿದರು.

ಪತ್ರಕರ್ತ ಮಾಗನೂರು ಮಂಜಪ್ಪ, ಚಿಕ್ಕಮಣ್ಣಿ ಬಡಾವಣೆಯ ಉದ್ಯಾನವನಕ್ಕೆ ಹೊಂದಿಕೊಂಡಂತೆ ಪಾಲಿಕೆಯಿಂದ ಮಳಿಗೆಗಳನ್ನು ಕಟ್ಟಿಸಿದರೆ, ಪಾಲಿಕೆಗೆ ಆದಾಯ ಬರುವ ಜೊತೆಗೆ ಅಲ್ಲಿನ ನಾಗರಿಕರಿಗೆ ಅನುಕೂಲವಾಗುತ್ತದೆ ಎಂದರು. ಕೆಎಸ್ಆರ್ಟಿಸಿ ಬಸ್ ನಿಲ್ದಾಣದ ಬಳಿ ಇರುವ ನಿರಾಶ್ರಿತರ ತಂಗುದಾಣವನ್ನು ಸಿ.ಜೆ. ಆಸ್ಪತ್ರೆ ಬಳಿಗೆ ಸ್ಥಳಾಂತರಿಸಿದರೆ ಹೆಚ್ಚಿನ ಅನುಕೂಲವಾಗುತ್ತದೆ ಎಂದರು.

ಪತ್ರಕರ್ತ ವೀರೇಶ್, ಹೈಸ್ಕೂಲ್ ಮೈದಾನದಲ್ಲಿರುವ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಪಾಲಿಕೆಯಿಂದ ಶೌಚಾಲಯ ನಿರ್ಮಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂದರು. ಸಾಮಾಜಿಕ ಕಾರ್ಯಕರ್ತ ಮಲ್ಲಿಕಾರ್ಜುನ ಇಂಗಳೇಶ್ವರ, ಗಾಳಿ ದುರ್ಗಮ್ಮ ದೇವಸ್ಥಾನವನ್ನು ಅಭಿವೃದ್ಧಿ ಪಡಿಸುವಂತೆ ಕೋರಿದರು.

ಸಭೆಯಲ್ಲಿ ಪಾಲಿಕೆ ನಾಮನಿರ್ದೇಶಿತ ಸದಸ್ಯರಾದ ಶಿವನಗೌಡ ಪಾಟೀಲ, ಜಯಮ್ಮ, ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ್ ನಾಯ್ಕ ಹಾಗೂ ಇತರರು ಉಪಸ್ಥಿತರಿದ್ದರು.

# ಬಾಡಿಗೆ ಕಟ್ಟದ ಮಳಿಗೆಗಳಿಗೆ ಬೀಗ

**(1ನೇ ಪುಟದಿಂದ)** ಇದೀಗ ಪಾಲಿಕೆ ಅಧಿಕಾರಿಗಳು ಬಾಡಿಗೆ ವಸೂಲಿ ಅಭಿಯಾನಕ್ಕಿಳಿದಿದ್ದಾರೆ. ಬಾಡಿಗೆ ಪಾವತಿಸದ ಮಳಿಗೆಗೆ ಬೀಗ ಹಾಕಲಾರಂಭಿಸಿದ್ದಾರೆ.

ಕಳೆದ ಜನವರಿ ತಿಂಗಳಲ್ಲಿ ಸುಮಾರು 12.50 ಲಕ್ಷ ರೂ. ಬಾಡಿಗೆ ವಸೂಲಾಗಿದ್ದರೆ, ಅಭಿಯಾನ ಆರಂಭದ ಮೊದಲ ದಿನವೇ 10.50 ಲಕ್ಷ ರೂ. ಬಾಡಿಗೆ ವಸೂಲಿಯಾಗಿದೆ.

ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿದ ಪಾಲಿಕೆ ಆಯುಕ್ತ ವಿಶ್ವನಾಥ ಪಿ.ಮುದಜ್ಜಿ, ಪಾಲಿಕೆಯ ಮಳಿಗೆಗಳಲ್ಲಿ ವ್ಯವಹಾರ ಮಾಡುತ್ತಿರುವವರು ಹಲವಾರು ವರ್ಷಗಳಿಂದ ಬಾಡಿಗೆ ಕಟ್ಟಿಲ್ಲ. ಈ ಬಗ್ಗೆ ನೋಟೀಸ್ ನೀಡಿ ಅಂತಿಮ ಗಡುವು ನೀಡಿದ್ದರೂ ಬಾಡಿಗೆ ಪಾವತಿಸದ ಮಳಿಗೆಗಳಿಗೆ ಬೀಗ ಹಾಕಲಾಗುತ್ತಿದೆ. ಈ ಪ್ರಕ್ರಿಯೆ ಇನ್ನೂ ಮುಂದುವರೆಯಲಿದೆ ಎಂದು ಹೇಳಿದರು

ಬಾಡಿಗೆ ಅಭಿಯಾನದಲ್ಲಿ ಕಂದಾಯಾಧಿಕಾರಿ ಕೆ. ನಾಗರಾಜ್, ಸಹಾಯಕ ಕಂದಾಯ ಅಧಿಕಾರಿ ಸುನೀಲ್, ಕಂದಾಯ ನಿರೀಕ್ಷಕ ತಿಮ್ಮಯ್ಯ ಹಾಗೂ ಕರ ವಸೂಲಿಗಾರರು ಇದ್ದರು.

## ಹಣ ವಸೂಲಿ: ಆಯುಕ್ತ

**(1ನೇ ಪುಟದಿಂದ) ಮಾಲೀಕರಿಗೆ ಸ್ವಚ್ಛಗೊಳಿಸುವಂತೆ ನೋಟಿಸ್ ನೀಡಿದ್ದೆವು. ಆದಾಗ್ಯೂ ಸ್ವಚ್ಛಗೊಳಿಸದ ಕಾರಣ , ಮಹಾನಗರ ಪಾಲಿಕೆವತಿಯಿಂದಲೇ ನಿವೇಶನ ಸ್ವಚ್ಛಗೊಳಿಸಿ, ಖರ್ಚನ್ನು ದಂಡದ ರೂಪದಲ್ಲಿ ಕಂದಾಯದ ವಸೂಲಿ ಮಾಡಲಾಗುವುದು ಎಂದು ಹೇಳಿದರು. ಈಗಾಗಲೇ ಕಂದಾಯ ಕಟ್ಟಿದ್ದರೆ, ಮುಂದಿನ ವರ್ಷದ ಕಂದಾಯದ ಜೊತೆ ಸ್ವಚ್ಛತಾ ಖರ್ಚಿನ ಹಣ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆಯುಕ್ತರು ಹೇಳಿದರು.**

# ಜಿಎಸ್‌ಟಿ: 1,500 ಕೋಟಿ ಕಡಿತ

**(1ನೇ ಪುಟದಿಂದ)** ಪಾಲಿನಲ್ಲಿ ರಾಜ್ಯಕ್ಕೆ 1,500 ಕೋ. ರೂ.ಗಳಷ್ಟು ಕಡಿಮೆಯಾಗುವ ಸಾಧ್ಯತೆ ಇದೆ. ಈ ಹಿಂದೆ ಜಿ.ಎಸ್.ಟಿ. ಬಾಬ್ತು ರಾಜ್ಯದ ಪಾಲು ಬಂದಿದೆ, 2018-19ರಲ್ಲಿ 18,340 ಕೋಟಿ ರೂ.ಗಳನ್ನು ರಾಜ್ಯಕ್ಕೆ ನಿಗದಿ ಪಡಿಸಲಾಗಿತ್ತು, ಆ ಮೊತ್ತ ಪಾವತಿಯಾಗಿದೆ.

ಹಾಗೆಯೇ 2019-20ರಲ್ಲಿ 20,702 ಕೋಟಿ ರೂ. ನಿಗದಿ ಪಡಿಸಲಾಗಿತ್ತು, ಆ ಮೊತ್ತವೂ ರಾಜ್ಯಕ್ಕೆ ಬಂದಿದೆ ಎಂದು ವಿವರಿಸಿದರು.

ಕೊರೊನಾ ಸಂಕಷ್ಟದಲ್ಲಿ ರಾಜ್ಯದ ಜಿ.ಎಸ್.ಟಿ. ಪಾಲು ಹಣವನ್ನು ಸಾಲದ ರೂಪದಲ್ಲಿ ಪಡೆಯಲು ಕೇಂದ್ರ ಸರ್ಕಾರ ಅನುಮತಿ ನೀಡಿರುವುದರಿಂದ ತೊಂದರೆಯಾಗುವುದಿಲ್ಲ.

ಸಾಲದ ರೂಪದಲ್ಲಿ ಪಡೆಯುವ ಜಿ.ಎಸ್.ಟಿ. ಪಾಲಿನ ಹಣಕ್ಕೆ ಅಸಲು, ಬಡ್ಡಿ ಕಟ್ಟಬೇಕಿಲ್ಲ, ಅದನ್ನು ಕೇಂದ್ರ ಸರ್ಕಾರವೇ ಪಾವತಿ ಮಾಡಲಿದೆ ಎಂದು ಸ್ಪಷ್ಟಪಡಿಸಿದರು.

ಕಳೆದ ತ್ರೈಮಾಸಿಕದಲ್ಲಿ ಜಿ.ಎಸ್.ಟಿ ಸಂಗ್ರಹ ಪ್ರಮಾಣ ಹೆಚ್ಚಳವಾಗಿದೆ, ಇದರಿಂದ ಕೇಂದ್ರ ಸರ್ಕಾರದ ಆರ್ಥಿಕ ಶಕ್ತಿ ಬಲಪಡಿಸಿದೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಸದಸ್ಯ ಯಶವಂತರಾವ್, ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿರುವ ಜಿ.ಎಸ್.ಟಿ.ಪಾಲು ಸಮರ್ಪಕವಾಗಿಲ್ಲ, ಆದ್ದರಿಂದ ಕೇಂದ್ರದ ಮೇಲೆ ಒತ್ತಡ ಹೇರಿ ಹೆಚ್ಚು ಹಣ ಪಡೆಯಬೇಕು ಎಂದು ಒತ್ತಾಯಿಸಿದರು.

# ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ



ದಾವಣಗೆರೆ, ಫೆ. 2- ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಜಿಲ್ಲಾಡಳಿತ, ಮಹಾನಗರ ಪಾಲಿಕೆ, ತೋಟಗಾರಿಕೆ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದಲ್ಲಿ ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ ಕಾರ್ಯಕ್ರಮವನ್ನು ಮೊನ್ನೆ ಆಚರಿಸಲಾಯಿತು. ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಬಿ. ಗೀತಾ ಅವರು ನ್ಯಾಯಾಲಯದ ಆವರಣದಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

# ಹೆಚ್ಚುವರಿ ಅಬಕಾರಿ ಶುಲ್ಕ ಕೈಬಿಡಲು ಆಗ್ರಹ

ದಾವಣಗೆರೆ, ಫೆ.2- ಲಾಕ್ ಡೌನ್‌ನಿಂದ ನಷ್ಟದಲ್ಲಿರುವ ಮದ್ಯದ ಉದ್ಯಮ, ಮದ್ಯ ಮಾರಾಟಗಾರರಿಗೆ ಆದ ನಷ್ಟಕ್ಕೆ ಸರ್ಕಾರ ಪರಿಹಾರ ನೀಡಬೇಕು. ಹೆಚ್ಚಳ ಮಾಡಿರುವ ಹೆಚ್ಚುವರಿ ಅಬಕಾರಿ ಶುಲ್ಕ ಕೈಬಿಡಬೇಕೆಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಜಿಲ್ಲಾ ಮದ್ಯ ಮಾರಾಟಗಾರರ ಸಂಘದ ನೇತೃತ್ವದಲ್ಲಿ ನಗರದಲ್ಲಿ ಇಂದು ಮದ್ಯ ಮಾರಾಟಗಾರರು ಧರಣಿ ಸತ್ಯಾಗ್ರಹ ನಡೆಸಿದರು.



**ನಗರದಲ್ಲಿ ಮದ್ಯ ಮಾರಾಟಗಾರರ ಧರಣಿ ಸತ್ಯಾಗ್ರಹ**

ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಿದ ಪ್ರತಿಭಟನಾಕಾರರು, ಮದ್ಯ ಮಾರಾಟಗಾರರ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ, ಜಿಲ್ಲಾಡಳಿತದ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿದರು.

ಮದ್ಯ ಮಾರಾಟಗಾರರ ಸಮಸ್ಯೆಗಳನ್ನು ಪರಿಹರಿಸುವಂತೆ ಸಿಎಂಗೆ ರಾಜ್ಯ ಮದ್ಯ ಮಾರಾಟಗಾರರ ಒಕ್ಕೂಟದಿಂದ ಸಾಕಷ್ಟು ಸಲ ಮನವಿ ಅರ್ಪಿಸಿದ್ದರೂ ಸ್ಪಂದಿಸಿಲ್ಲ. ನಮ್ಮ ಸಮಸ್ಯೆ ಕುರಿತಂತೆ ಸಭೆ ಕರೆದು, ಚರ್ಚಿಸುವ ವ್ಯವಧಾನವನ್ನು ಸರ್ಕಾರ ತೋರಿಸಿಲ್ಲ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜೆ. ಈಶ್ವರ್ ಸಿಂಗ್ ಕವಿತಾಳ್ ಅಸಮಾಧಾನಗೊಂಡರು.

2009ರಲ್ಲಿ ಇದ್ದಂತಹ ಒಟ್ಟು ಸನ್ನದುಗಳ ಸಂಖ್ಯೆ 8306 ಈಗ 11 ಸಾವಿರ ದಾಟಿದೆ. ಮಾರಾಟದಲ್ಲಿ ಏರಿಕೆ ಇಲ್ಲ. ಖರ್ಚು, ವೆಚ್ಚ 2 ಪಟ್ಟು ಹೆಚ್ಚಾಗಿವೆ. ಶೇ.10ಕ್ಕೆ ಇಳಿಸಿರುವ ಲಾಭಾಂಶವನ್ನು ಶೇ.20ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ರಾಜ್ಯಾದ್ಯಂತ ಏಕರೂಪದ ಸನ್ನದ ಶುಲ್ಕ ವಿಧಿಸಿ, ಸನ್ನದುದಾರರ ಖರೀದಿ ಮೌಲ್ಯದ ಮೇಲೆ ಶುಲ್ಕ ವಿಧಿಸಲಿ. ಇದರಿಂದ ಸರ್ಕಾರದ ಬೊಕ್ಕಸಕ್ಕೂ ಹೆಚ್ಚು ವರಮಾನ ಬರಲಿದೆ. ಸನ್ನದುದಾರರಿಗೂ ಸಾಮಾಜಿಕ ನ್ಯಾಯ ಕೊಟ್ಟಂತಾಗುತ್ತದೆ.

ಸಿಎಲ್-2ಗಳಲ್ಲಿ ಪಾನಿಕರಿಗೆ ದರ್ಶಿನಿ ಹೋಟೆಲ್ ಮಾದರಿಯಲ್ಲಿ ನಿಂತು ಕುಡಿಯಲು (ಆಹಾರ ರಹಿತವಾಗಿ) ಅವಕಾಶ ನೀಡಬೇಕು. ತಮಿಳುನಾಡು, ಆಂಧ್ರದಲ್ಲಿ ಇಂತಹ ವ್ಯವಸ್ಥೆ ಇದೆ. ಇದರಿಂದ ಹೆಚ್ಚುವರಿ ಶುಲ್ಕ ವಿಧಿಸುವ ಕಾರಣಕ್ಕೆ ಸರ್ಕಾರಕ್ಕೂ ಆದಾಯ ಬರಲಿದೆ. ಸಿಎಲ್-9ಗಳಲ್ಲಿ ಮದ್ಯ ಪಾರ್ಸೆಲ್‌ಗೆ ಅವಕಾಶ ನೀಡಬೇಕು. ನೆರೆಯ ಮಹಾರಾಷ್ಟ್ರದಲ್ಲಿ ಈ ವ್ಯವಸ್ಥೆ ಇದ್ದು, ನಮ್ಮಲ್ಲೂ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಪತ್ರಿಭಟನೆಯಲ್ಲಿ ಮಹೇಶ್ ಶೆಟ್ಟಿ, ಬಾತಿ ಶಂಕರ್, ಶ್ರೀನಾಥ್, ಆನಂದ್, ಕುಮಾರ್, ಪ್ರಭಾಕರ ಶೆಟ್ಟಿ, ಚಂದ್ರಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

# ಸಾರ್ವಜನಿಕ ಪ್ರಕಟಣೆ

**ನನ್ನ ಕಕ್ಷಿದಾರರುಗಳಾದ :**

**(1) ಶ್ರೀಮತಿ ರಾಜೇಶ್ವರಿ ಪಿ. ಪಾಟೀಲ್ ಬಿನ್ ದಿವಂಗತ ಶಿವಯೋಗಿ ಕಂಬಿನೂಲ್ ಕೋಂ ಪ್ರಕಾಶ್ ಆರ್. ಪಾಟೀಲ್, ಬೆಂಗಳೂರು**

**(2) ಶ್ರೀಮತಿ ಪೂರ್ಣಿಮಾ ಬಿನ್ ದಿವಂಗತ ಶಿವಯೋಗಿ ಕಂಬಿನೂಲ್ ಕೋಂ ದಿವಂಗತ ಮಹಾಂತೇಶ್ ಎಸ್.ಪಿ, ಬೆಂಗಳೂರು.**

**(3) ಶ್ರೀ ಸಚಿನ್ ವಿ. ಶೆಟ್ಟರ್ ಬಿನ್ ವಿಶ್ವನಾಥ ಶೆಟ್ಟರ್ ಹಾಗೂ ಶಶಿಕಲಾ ವಿ. ಶೆಟ್ಟರ್ ಶಿವಯೋಗಿ ಕಂಬಿನೂಲ್ ಇವರ ಮೊಮ್ಮಗ ಹಾಗೂ ಸಾಮಾನ್ಯ ಅಧಿಕಾರ ಪತ್ರ ಮೂಲಕ ಅಧಿಕಾರ ಪಡೆದವರು, ಬೆಂಗಳೂರು ಮತ್ತು**

**(4) ಶ್ರೀಮತಿ ಮಂಗಳ ಬಿನ್ ದಿವಂಗತ ಶಿವಯೋಗಿ ಕಂಬಿನೂಲ್ ಕೋಂ ಸಂಜಯ್ ಬಸವರಾಜಪ್ಪ ಕಿತ್ತೂರ್, ಹುಬ್ಬಳ್ಳಿ.**

ಇವರುಗಳು ತಮ್ಮ ಸಹೋದರರುಗಳಾದ 1ನೇ ಕೆ.ಎಸ್. ಕೊಟ್ರೇಶ್, 2ನೇ ಕೆ.ಎಸ್. ಗಂಗಾಧರ ಹಾಗೂ 3) ಕೆ.ಎಸ್. ರುದ್ರಬಸವರಾಜ ಮತ್ತು ಇವರ ಮಾತೃಶ್ರೀಯವರಾದ ಶ್ರೀಮತಿ ನಿರ್ಮಲಮ್ಮ ಹಾಗೂ ಇವರುಗಳ ಸಹೋದರಿಯಾದ ಶ್ರೀಮತಿ ಸುಜಾತ ಇವರು ಪೌತಿ ಆದ ಕಾರಣ ಅವರ ಪತಿಯಾದ ಎಸ್.ಬಿ. ಗಿರೀಶ್ ಇವರುಗಳ ಮೇಲೆ ಒಂದು ಅಸಲು ದಾವೆಯನ್ನು ಪಾಲು ವಿಭಾಗ ಹಾಗೂ ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ ಘನ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆಯಲ್ಲಿ ಅಸಲು ದಾವೆ ನಂ. 15/2021 ನ್ನು ಹೂಡಿ ಸದರಿ ದಾವೆಯಲ್ಲಿ ಘನ ನ್ಯಾಯಾಲಯದಿಂದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪ್ರತಿವಾದಿ ಕೊಟ್ರೇಶ್, ಗಂಗಾಧರ ಹಾಗೂ ರುದ್ರಬಸವರಾಜ ಇವರುಗಳ ಮೇಲೆ ಪಡೆದಿದ್ದು, ಸದರಿ ಆಜ್ಞೆಯ ಪ್ರಕಾರ ಮೇಲ್ಕಂಡ ಪ್ರತಿವಾದಿಗಳು ಯಾವುದೇ ತರಹದ ಈ ಕೆಳಕಂಡ ಅನುಸೂಚಿ ಆಸ್ತಿಗಳನ್ನು ಮಾರಾಟ ಮಾಡುವುದಾಗಲೀ, ಅವುಗಳ ಮೇಲೆ ಯಾವುದೇ ತರಹದ ಹೊಣೆಗಾರಿಕೆ ಸ್ಥಾಪನೆ ಮಾಡಬಾರದೆಂದು ಘನ ನ್ಯಾಯಾಲಯ ಆದೇಶವನ್ನು ಹೊರಡಿಸಿರುವ ಪ್ರಯುಕ್ತ, ಮೇಲ್ಕಂಡ ನನ್ನ ಕಕ್ಷಿದಾರರು ಈ ಮೂಲಕ ಸಾರ್ವಜನಿಕರ ತಿಳುವಳಿಕೆಗಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕಾರಣ ಈ ಕೆಳಕಂಡ ಅನುಸೂಚಿ ಸೊತ್ತುಗಳ ಮೇಲೆ ಯಾರಾದರೂ ಯಾವುದೇ ರೀತಿಯ ವ್ಯವಹಾರ ಮಾಡಿದ ಪಕ್ಷದಲ್ಲಿ ಸದರಿ ವ್ಯವಹಾರಗಳಿಗೆ ನನ್ನ ಕಕ್ಷಿದಾರರಾಗಲೀ, ನನ್ನ ಕಕ್ಷಿದಾರರ ವಾರಸುದಾರರಾಗಲೀ ಹೊಣೆಗಾರರಾಗಿರುವುದಿಲ್ಲ. ಆ ರೀತಿ ಮಾಡಿದಂತಹ ವ್ಯವಹಾರಗಳಿಗೆ ಅವರೇ ಜವಾಬ್ದಾರರು.

## ಅನುಸೂಚಿ :

**1) ಖಾಲಿ ನಿವೇಶನ ಇದರ ಡೋರ್ ಸಂಖ್ಯೆ : 2269 ಇದರ ಅಳತೆ 85x120 ಅಡಿ ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ.**

**2) ಆರ್.ಸಿ.ಸಿ. ವಾಸದ ಮನೆ ಇದರ ಡೋರ್ ನಂ. 653/1 ಮತ್ತು 653/2 ಇದರ ಒಟ್ಟು ವಿಸ್ತೀರ್ಣ 54x69 ಅಡಿಗಳು, ಪಿ.ಜೆ. ಬಡಾವಣೆ, ದಾವಣಗೆರೆ**

**3) ವಾಣಿಜ್ಯ ಮಳಿಗೆಗಳು ಇವುಗಳ ಡೋರ್ ನಂ. 179/1 ರಿಂದ 179/9 ರ ವರೆಗೆ ಇದ್ದು ಇದರ ಒಟ್ಟು ವಿಸ್ತೀರ್ಣ 111x44 ಅಡಿಗಳು, ವಸಂತ ಚಿತ್ರಮಂದಿರ ರಸ್ತೆ, ದಾವಣಗೆರೆ.**

**4) ಉಗ್ರಾಣ ಇದರ ಡೋರ್ ನಂ. 1165, ವಿಸ್ತೀರ್ಣ 45x120 ಅಡಿ ಎಪಿಎಂಸಿ ಯಾರ್ಡ್, ಡಿ. ಬ್ಲಾಕ್, ದಾವಣಗೆರೆ.**

**5) ಖಾಲಿ ನಿವೇಶನ ಇದರ ಡೋರ್ ನಂ. 3918/31, ವಿಸ್ತೀರ್ಣ 40x60 ಅಡಿ ವಿದ್ಯಾನಗರ ಮುಖ್ಯರಸ್ತೆ, ಕೆನರಾ ಬ್ಯಾಂಕ್‌ನ ಎದುರು, ವಿದ್ಯಾನಗರ, ದಾವಣಗೆರೆ.**

**6) ಖಾಲಿ ನಿವೇಶನ ಸಂಖ್ಯೆ : 32, ಇದರ ಡೋರ್ ನಂ. 3919/32, ಇದರ ವಿಸ್ತೀರ್ಣ 40x60 ಅಡಿ ವಿದ್ಯಾನಗರ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಎದುರು, ವಿದ್ಯಾನಗರ, ದಾವಣಗೆರೆ.**

**7) ಖಾಲಿ ನಿವೇಶನ ನಂ : 33, ಇದರ ಡೋರ್ ನಂ. 3920/33, ವಿಸ್ತೀರ್ಣ 40x60 ಅಡಿ ವಿದ್ಯಾನಗರ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಎದುರು, ವಿದ್ಯಾನಗರ, ದಾವಣಗೆರೆ.**

**8) ಖಾಲಿ ನಿವೇಶನ ಡೋರ್ ನಂ. 3921, ವಿಸ್ತೀರ್ಣ 80x120 ಅಡಿ ವಿದ್ಯಾನಗರ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಎದುರು, ವಿದ್ಯಾನಗರ, ದಾವಣಗೆರೆ.**

**9) ಖಾಲಿ ನಿವೇಶನ ನಂ. 36, ಇದರ ಡೋರ್ ನಂ. 3923/36 ಮತ್ತು 3923/36/1 ವಾಣಿಜ್ಯ ಸೊತ್ತಾಗಿದ್ದು ಇದರ ಅಳತೆ 80x120 ಅಡಿ ವಿದ್ಯಾನಗರ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಎದುರು, ವಿದ್ಯಾನಗರ, ದಾವಣಗೆರೆ.**

**10) ಖಾಲಿ ನಿವೇಶನ ನಂ. 37, ಇದರ ಡೋರ್ ನಂ. 3924/37 ಮತ್ತು 3924/37/1 ಒಂದು ವಾಣಿಜ್ಯ ಸ್ವತ್ತಾಗಿದ್ದು, ಒಟ್ಟು ವಿಸ್ತೀರ್ಣ 80x120 ಅಡಿ ವಿದ್ಯಾನಗರ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಎದುರು, ವಿದ್ಯಾನಗರ, ದಾವಣಗೆರೆ.**

**11) ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸೊತ್ತಿನ ಸರ್ವೆ ನಂ. 146/1ಎ, 11ಎ ಇದರ ವಿಸ್ತೀರ್ಣ 1 ಎಕರೆ 22 ಗುಂಟೆ ಇದ್ದು ಸದರಿ ಸೊತ್ತು ದೊಡ್ಡಬಾತಿ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು.**

**12) ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸೊತ್ತಿನ ಸರ್ವೆ ನಂ. 146/1ಎ 11ಬಿ ಇದರ ವಿಸ್ತೀರ್ಣ 1 ಎಕರೆ 22 ಗುಂಟೆ ಇದ್ದು ಸದರಿ ಸೊತ್ತು ದೊಡ್ಡಬಾತಿ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು.**

**13) ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸೊತ್ತಿನ ಸರ್ವೆ ನಂ. 146/1ಎ 11ಸಿ ಇದರ ವಿಸ್ತೀರ್ಣ 1 ಎಕರೆ 23 ಗುಂಟೆ ಇದ್ದು ಸದರಿ ಸೊತ್ತು ದೊಡ್ಡಬಾತಿ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು.**

**14) ಭೂ ಪರಿವರ್ತನೆಯಾಗದ ಜಮೀನು ಇದರ ಸರ್ವೆ ನಂ. 145/20, ವಿಸ್ತೀರ್ಣ 31 ಗುಂಟೆ ದೊಡ್ಡಬಾತಿ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲೂಕು.**

**15) ಭೂ ಪರಿವರ್ತನೆಯಾಗದ ಜಮೀನು ಇದರ ಸರ್ವೆ ನಂ. 145/19, ವಿಸ್ತೀರ್ಣ 29 ಗುಂಟೆ, ದೊಡ್ಡಬಾತಿ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು.**

**16) ಭೂ ಪರಿವರ್ತನೆಯಾಗದ ಕೈಗಾರಿಕಾ ಜಮೀನು ಇದರ ಸರ್ವೆ ನಂ. 145/20 ವಿಸ್ತೀರ್ಣ 31 ಗುಂಟೆ ದೊಡ್ಡಬಾತಿ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು.**

**17) ಭೂ ಪರಿವರ್ತನೆಯಾಗದ ಕೈಗಾರಿಕಾ ಜಮೀನು ಇದರ ಸರ್ವೆ ನಂ. 145/15 ವಿಸ್ತೀರ್ಣ 20 ಗುಂಟೆ ದೊಡ್ಡಬಾತಿ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು.**

**18) ಭೂ ಪರಿವರ್ತನೆಯಾಗದ ಕೈಗಾರಿಕಾ ಜಮೀನು ಇದರ ಸರ್ವೆ ನಂ. 145/20 ವಿಸ್ತೀರ್ಣ 31 ಗುಂಟೆ ದೊಡ್ಡಬಾತಿ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು.**

**19) ಫಲವತ್ತಾದ ಜಮೀನು ಇದರ ಸರ್ವೆ ನಂ. 63/1 ವಿಸ್ತೀರ್ಣ 7 ಎಕರೆ 13 ಗುಂಟೆ, ಮಿಟ್ಲಕಟ್ಟೆ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

**20) ಫಲವತ್ತಾದ ಜಮೀನು ಇದರ ಸರ್ವೆ ನಂ. 63/2 ವಿಸ್ತೀರ್ಣ 7 ಎಕರೆ 13 ಗುಂಟೆ ಮಿಟ್ಲಕಟ್ಟೆ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

**21) ಜಂಟಿ ವಾಣಿಜ್ಯ ಸೊತ್ತು ಇದರ ವಿಸ್ತೀರ್ಣ 4884 ಚದರಡಿ (111x44 ಅಡಿ) ವಸಂತ ಚಿತ್ರಮಂದಿರ ರಸ್ತೆ, ದಾವಣಗೆರೆ.**

**22) ಜಂಟಿಯಾಗಿ ಪರಿವರ್ತನೆಗೊಂಡ ವಾಣಿಜ್ಯ ಸೊತ್ತು ಸರ್ವೆ ನಂ. 49/3 ಇದರ ವಿಸ್ತೀರ್ಣ 2 ಎಕರೆ 4 ಗುಂಟೆ, ಸದರಿ ಸೊತ್ತು ಪರಿವರ್ತನೆಗೊಂಡ ಬಡಾವಣೆ ಕುಂದುವಾಡ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ.**

**23) ಜಂಟಿ ಜಮೀನು ಇದರ ಸರ್ವೆ ನಂ. 26/2 ವಿಸ್ತೀರ್ಣ 5 ಎಕರೆ 5 ಗುಂಟೆ ಅಗಸನಕಟ್ಟೆ ಗ್ರಾಮ, ಈ ಸೊತ್ತು ರಾಷ್ಟ್ರೀಯ ಹೆದ್ದಾರಿಗೆ ಲಗತ್ತಾಗಿರುತ್ತದೆ, ದಾವಣಗೆರೆ.**

**24) ಜಂಟಿ ಜಮೀನು ಇದರ ಸರ್ವೆ ನಂ. 26/1ಎ ವಿಸ್ತೀರ್ಣ 18.8 ಗುಂಟೆ ಅಗಸನಕಟ್ಟೆ ಗ್ರಾಮ ರಾಷ್ಟ್ರೀಯ ಹೆದ್ದಾರಿಗೆ ಲಗತ್ತಾಗಿರುತ್ತದೆ. ದಾವಣಗೆರೆ.**

**25) ಜಂಟಿ ಜಮೀನು ಇದರ ಸರ್ವೆ ನಂ. 25/1 ವಿಸ್ತೀರ್ಣ 7 ಎಕರೆ 4ಗುಂಟೆ ಅಗಸನಕಟ್ಟೆ ಗ್ರಾಮ ರಾಷ್ಟ್ರೀಯ ಹೆದ್ದಾರಿಗೆ ಲಗತ್ತಾಗಿರುತ್ತದೆ, ದಾವಣಗೆರೆ.**

**26) ಜಂಟಿ ವಾಣಿಜ್ಯ ಸ್ವತ್ತು ಇದರ ಡೋರ್ ನಂ. 87/1 ರಿಂದ 5 ಸದರಿ ಸೊತ್ತಿನಲ್ಲಿ ಅರುಣಾ ಚಿತ್ರಮಂದಿರವಿರುತ್ತದೆ. ಇದರ ಅಳತೆ 100x150 ಅಡಿ ಪಿ.ಜೆ. ಬಡಾವಣೆ, ಪಿ.ಬಿ. ರಸ್ತೆ, ದಾವಣಗೆರೆ. ಮತ್ತು**

**27) ಜಂಟಿ ವಾಣಿಜ್ಯ ಸೊತ್ತು ಇದರ ಡೋರ್ ನಂ. 87/2 ರಿಂದ 87/5 ಸದರಿ ಸೊತ್ತು ಅರುಣಾ ಚಿತ್ರಮಂದಿರದ ಹಿಂಭಾಗದಲ್ಲಿ ಇರುತ್ತದೆ. ಇದರ ಅಳತೆ 52x74 ಅಡಿಗಳು ಪಿ.ಜೆ. ಬಡಾವಣೆ, ಪಿ.ಬಿ. ರಸ್ತೆ, ದಾವಣಗೆರೆ. ಸದರಿ ಸೊತ್ತಿನಲ್ಲಿ ವಾಣಿಜ್ಯ ಮಳಿಗೆಗಳಿದ್ದು ಅವುಗಳನ್ನು ಬಾಡಿಗೆಗೆ ಕೊಟ್ಟಿರುತ್ತಾರೆ.**

**ಘನ ನ್ಯಾಯಾಲಯದ ಆದೇಶದ ನೆರಳಚ್ಚು ಪ್ರತಿಯನ್ನು ಲಗತ್ತಿಸಲಾಗಿದೆ.**

ಕಕ್ಷಿದಾರರ ಸಹಿ/-
**ಶ್ರೀಮತಿ ಪೂರ್ಣಿಮಾ,** 2ನೇ ವಾದಿ, ಬೆಂಗಳೂರು.
ತಮ್ಮ ಪರ ಹಾಗೂ ಇತರ ವಾದಿಗಳ ಪರ

ಇಂತಿ ವಿಶ್ವಾಸಿ ಸಹಿ/-
**(ದೊಗ್ಗಳ್ಳಿ ವಿಜಯಪ್ರಕಾಶ್)**
ಎಂ.ಎ., ಎಲ್‌ಎಲ್.ಬಿ., ಡಿಜಿಎಸ್., ಡಿ-ಇಪಿಐ, ವಾದಿಗಳ ಪರ ವಕೀಲರು
**ಮೊಬೈಲ್ : 94483-39010**

**ಸ್ಥಳ : ದಾವಣಗೆರೆ, ದಿನಾಂಕ : 29.01.2021**

# ಕನ್ನಡದ ಶಬ್ಧಗಳನ್ನು ಸಮರ್ಥವಾಗಿ ದುಡಿಸಿಕೊಂಡ ನುಡಿ ಮಾಂತ್ರಿಕ ಬೇಂದ್ರೆ



ರಾಣೇಬೆನ್ನೂರು

ರಾಣೇಬೆನ್ನೂರು, ಫೆ. 2- ಕನ್ನಡ ಭಾಷೆಯ ಪ್ರಾದೇಶಿಕ ಶಬ್ಧಗಳನ್ನು ಸಮರ್ಥವಾಗಿ ದುಡಿಸಿಕೊಂಡ ನುಡಿ ಮಾಂತ್ರಿಕ ಬೇಂದ್ರೆಯವರು. ಅವರ ಜೀವನವೇ ಕಾವ್ಯ. ಅವರ ಬದುಕಿನ ಪಾಡೇ ಹಾಡಾಗಿ ಹೊರ ಹೊಮ್ಮಿದೆ ಎಂದು ದವನ್ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಕೊಟ್ರಪ್ಪ ಕಮಲಾಪುರ ತಿಳಿಸಿದರು.

ತಾಲ್ಲೂಕಿನ ಕೋಡಿಯಾಲ ಹೊಸಪೇಟೆಯ ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದ.ರಾ. ಬೇಂದ್ರೆಯವರ 125ನೇ ಜಯಂತಿ ಅಂಗವಾಗಿ ನಿನ್ನೆ ಏರ್ಪಡಿಸಿದ್ದ ಕವಿ ನಮನ ಎಂಬ ವಿಶೇಷ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ, ಬೇಂದ್ರೆಯವರು ಪ್ರಕೃತಿಯ ಪ್ರತಿಭಾವಗಳನ್ನು ತನ್ನ ಶಬ್ಧ ಚಮತ್ಕಾರದಲ್ಲೂ ಹೆಣೆದ ಸಾಹಿತ್ಯ ಹೂಗಾರರಾಗಿದ್ದಾರೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಕೊಟ್ರಪ್ಪ, ಬೇಂದ್ರೆಯವರ ಕಾವ್ಯದಲ್ಲಿನ ಜಾನಪದ ಸಾಹಿತ್ಯ ಸಹೃದಯವನ್ನು ಸೆಳೆಯುವ ಚಮತ್ಕಾರವಾಗಿದೆ. ಇವರ ಪ್ರತಿ ಕವಿತೆಗಳು ಕನಸಿನ ಮತ್ತು ಎಚ್ಚರಗಳನ್ನು ಒಳಗೊಂಡಿವೆ ಎಂದು ತಿಳಿಸಿದರು.

ಮೆಡ್ಲೇರಿ ವಲಯದ ಶಿಕ್ಷಣ ಸಂಯೋಜಕ ಅಶೋಕ ಬಿ.ಕೆ. ಮಾತನಾಡಿ, ವಿದ್ಯಾರ್ಥಿಗಳಿಗೆ ನಮ್ಮ ಕನ್ನಡ ಸಾಹಿತ್ಯ ಮತ್ತು ಅದರ ಶ್ರೀಮಂತಿಕೆಗೆ ಶ್ರಮಿಸಿದ ಕವಿಗಳ ಪರಿಚಯದ ಅವಶ್ಯಕತೆ ಇದೆ. ಆ ನಿಟ್ಟಿನಲ್ಲಿ ಆಯೋಜಿಸಿರುವ ಈ ಕಾರ್ಯಕ್ರಮ ಸ್ವಾಗತಾರ್ಹ ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷರಾದ ಪುಟ್ಟಮ್ಮ ಹಿರೇಮಠ, ಗ್ರಾ.ಪಂ. ನೂತನ ಅಧ್ಯಕ್ಷರಾದ ಚೇತನ್ ಮಂಜಣ್ಣ ಪೂಜಾರ್, ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ ಬಾವಿಕಟ್ಟಿ, ಜಿ.ಆರ್. ಹನುಮಂತಪ್ಪ, ಗದಿಗೆಪ್ಪ ಓಲೇಕಾರ್, ಶಿಕ್ಷಕರಾದ ಶಿವಯ್ಯ ಹಿರೇಮಠ, ದೇವರಾಜ್ ಮಲ್ಲಾಪುರ, ಎಸ್. ರೇಣುಕಮ್ಮ, ಸಿ. ರೇಖಾ ಮತ್ತಿತರರು ಭಾಗವಹಿಸಿದ್ದರು.

## 33ನೇ ವಾರ್ಡ್‌ನಲ್ಲಿ ಕ್ರಾಸ್ ಬೋರ್ಡ್ ಉದ್ಘಾಟನೆ



ದಾವಣಗೆರೆ, ಫೆ.2- ನಗರ ಪಾಲಿಕೆಯ 33ನೇ ವಾರ್ಡ್‌ನಲ್ಲಿ ಕ್ರಾಸ್ ಬೋರ್ಡ್ ಉದ್ಘಾಟನೆ ಕಾರ್ಯಕ್ರಮವನ್ನು ಮೇಯರ್ ಬಿ.ಜಿ. ಅಜಯ್‌ಕುಮಾರ್ ನೆರವೇರಿಸಿದರು. ಪಾಲಿಕೆ ಸದಸ್ಯ ಕೆ.ಎಂ.ವೀರೇಶ್, ಬಿಜೆಪಿ ಮುಖಂಡ ಕೆ.ಎಂ.ಸುರೇಶ್, ಸೋಮಶೇಖರಪ್ಪ, ರಾಘವೇಂದ್ರ ನಾಯಿರಿ, ಗುಬ್ಬಿ ಬಸಣ್ಣ, ಶಾಂತಪ್ಪ ಪೂಜಾರಿ, ಚಂದ್ರನಾಯಕ್ ಸ್ವಾಮಿ, ಧನ್ಯ, ಹೆಚ್.ಬಸವರಾಜ್, ವಿಜಯಣ್ಣ, ಸಿದ್ದೇಶ್, ಸೋಮಶೇಖರ್, ವಿರುಪಣ್ಣ ಹಾಗೂ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## 23ನೇ ವಾರ್ಡ್‌ನಲ್ಲಿ ರಾಮಮಂದಿರ ನಿರ್ಮಾಣದ ನಿಧಿ ಸಂಗ್ರಹ



ದಾವಣಗೆರೆ, ಫೆ.2- ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ನಿಧಿ ಸಂಗ್ರಹಣಾ ಕಾರ್ಯಕ್ರಮವನ್ನು ನಗರದ 23 ನೇ ವಾರ್ಡಿನಲ್ಲಿ ವಾರ್ಡ್ ಸದಸ್ಯರಾದ ರೇಖಾ ಸುರೇಶ್ ಗಂಡುಗಾಳೆ, ದೂಡಾ ಸದಸ್ಯ ಜಯರುದ್ರಪ್ಪ, ಬಿಜೆಪಿ ಮುಖಂಡರಾದ ಸುರೇಶ್ ಗಂಡುಗಾಳೆ, ತಿಮ್ಮೇಶ್, ವೀಣಾ ಎಸ್.ಎನ್. ದಯಾನಂದ, ಚಂದ್ರಕಲಾ ಭಾಗವಹಿಸಿದ್ದರು.

## ಪಂಚಮಸಾಲಿ ಉಭಯ ಶ್ರೀಗಳಿಗೆ ನಗರ ಪಾಲಿಕೆ ನೌಕರರ ಸ್ವಾಗತ




ದಾವಣಗೆರೆ,ಫೆ.2- ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ಪಂಚಮಸಾಲಿ ಸಮಾಜದ ಜಗದ್ಗುರುಗಳಾದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮತ್ತು ಶ್ರೀ ವಚನಾನಂದ ಸ್ವಾಮೀಜಿ ನಡೆಸುತ್ತಿರುವ ಪಾದಯಾತ್ರೆಯು ನಿನ್ನೆ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಮಹಾನಗರ ಪಾಲಿಕೆ ನೌಕರರ ಸಂಘದಿಂದ ಬರ ಮಾಡಿಕೊಳ್ಳಲಾಯಿತು. ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ಮತ್ತಿತರರು ಉಭಯ ಶ್ರೀಗಳಿಗೆ ಪುಷ್ಪ ಮಾಲೆ ಹಾಕುವುದರ ಮೂಲಕ ಜಗದ್ಗುರುಗಳನ್ನು ಸ್ವಾಗತಿಸಿದರು. ಜಿಲ್ಲಾ ಪಂಚಾಯ್ತಿ ಸದಸ್ಯ ಕೆ.ಎಸ್. ಬಸವಂತಪ್ಪ, ಎಪಿಎಂಸಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಚಿಕ್ಕಜಾಜೂರಿನ ಪಿ.ಎಸ್. ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

## ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ

ದಾವಣಗೆರೆ, ಫೆ.2- ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ಜಿಲ್ಲಾಧಿಕಾರಿಗಳ ಕಚೇರಿ ತುಂಗಭದ್ರಾ ಸಭಾಂಗಣದಲ್ಲಿ ನಾಡಿದ್ದು ದಿನಾಂಕ 4ರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ಶ್ರೀಧರ್ ಕೆ. ಮಲ್ಲಾಡದ ತಿಳಿಸಿದ್ದಾರೆ.

## ಪಡಿತರ ವಿತರಕರ ವಾರ್ಷಿಕ ಮಹಾಸಭೆ



ದಾವಣಗೆರೆ, ಫೆ.2- ನಗರ ಮತ್ತು ಗ್ರಾಮಾಂತರ ಪಡಿತರ ವಿತರಕರ ಸಂಘದ ವಾರ್ಷಿಕ ಮಹಾಸಭೆ ಈಚೆಗೆ ನಡೆಯಿತು. ಕಾರ್ಯಕ್ರಮವನ್ನು ಜಂಟಿ ನಿರ್ದೇಶಕ ಮಂಟೆಸ್ವಾಮಿ ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಪಡಿತರ ವಿತರಕರ ಸಂಘದ ಅಧ್ಯಕ್ಷ ಜಿ.ಡಿ. ಗುರುಸ್ವಾಮಿ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ತಹಶೀಲ್ದಾರ್ ಗಿರೀಶ್, ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ವಿ. ಚಂದ್ರಶೇಖರ್, ಲಯನ್ಸ್ ಕ್ಲಬ್ ಉಪಾಧ್ಯಕ್ಷ ಎಸ್. ಓಂಕಾರಪ್ಪ, ಪ್ರಕಾಶ್, ವೆಂಕಟೇಶ್ ನಾಯಕ್, ಎನ್.ಆರ್. ರವಿ, ಬಿ. ಆರ್. ವೀರಣ್ಣ, ಬಿ.ಎಸ್. ಭರಮಣ್ಣ ಮಳಲ್ಕೆರೆ, ರವಿಕುಮಾರ್ ಬಾಡ, ಗಂಗಾಧರ ಹೊನ್ನೂರು ಭಾಗವಹಿಸಿದ್ದರು. ಕೆ.ಆರ್. ಗಂಗರಾಜ್, ಎಂ.ಎನ್. ನಾಗರಾಜ್, ಅಲ್ತಾಫ್, ಸದಣ್ಣ ಮಳಲ್ಕೆರೆ ಮತ್ತಿತರರು ಆಗಮಿಸಿದ್ದರು.

## ರಾಮ ಮಂದಿರ ನಿರ್ಮಾಣಕ್ಕೆ ಡಾ.ಶಹೀದ್ ನಿಧಿ ಸಮರ್ಪಣೆ



ದಾವಣಗೆರೆ,ಫೆ.2- ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಿಸುವ ಸಂಬಂಧ ನಡೆಸುತ್ತಿರುವ ನಿಧಿ ಸಮರ್ಪಣಾ ಅಭಿಯಾನದಲ್ಲಿ ಮಾಜಿ ಸಂಸದ ದಿ. ಜಗಳೂರು ಇಮಾಂ ಸಾಬ್ ಅವರ ಮೊಮ್ಮಗ ಡಾ.ಶಹೀದ್ ಅವರು ನಿಧಿ ಸಮರ್ಪಿಸಿದರು. ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿ ಕೆ.ಎಂ. ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

# ಭಯ ಹುಟ್ಟಿಸುವುದು ಜ್ಯೋತಿಷ್ಯ ಶಾಸ್ತ್ರವಲ್ಲ : ಓಂಕಾರ ಶ್ರೀಗಳು




ದಾವಣಗೆರೆ, ಫೆ.2- ಜ್ಯೋತಿಷ್ಯ ಎಂದೂ ಭಯ ಹುಟ್ಟಿಸುವುದಿಲ್ಲ. ಬದಲಿಗೆ ಭವಿಷ್ಯದ ಸೂಕ್ಷ್ಮ, ಅತಿ ಸೂಕ್ಷ್ಮ ವಿಚಾರಗಳನ್ನು ಸರಳವಾಗಿ ತಿಳಿಸುವುದಾಗಿದೆ. ಭಯ ಹುಟ್ಟಿಸಿ ಜ್ಯೋತಿಷ್ಯ ಹೇಳುವುದು ಜ್ಯೋತಿಷ್ಯ ಶಾಸ್ತ್ರ ಹೇಳುವವರಲ್ಲ ಎಂದು ಆವರಗೊಳ್ಳ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ಡಾ. ಸಿ.ಕೆ. ಆನಂದತೀರ್ಥಾಚಾರ್ ಅವರ ರಚನೆಯ 'ಸಂಸ್ಕಾರ ಸೌರಭ' ಪುಸ್ತಕವನ್ನು ಲೋಕಾರ್ಪಣೆಗೊಳಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಪಂಚ ಭೂತಗಳು ಯಾವಾಗ ಹುಟ್ಟಿದವು. ಅಲ್ಲಿಂದ ಜ್ಯೋತಿಷ್ಯ ಸೃಷ್ಟಿಯಾಗಿದೆ. ಅದು ಪಂಚಭೂತಗಳು ಇರುವವರೆಗೂ ಉಳಿಯುತ್ತದೆ. ಮನುಷ್ಯನ ಪ್ರತಿಯೊಂದು ಸ್ತರ, ಆಯಾಮಗಳಲ್ಲಿ ಕೂಡ ತಾತ್ವಿಕ ನೆಲೆಗಟ್ಟಿನಲ್ಲಿ ಅರಿವು, ತಿಳಿವಳಿಕೆಯ ಕೈಗನ್ನಡಿಯಾಗಿದೆ ಎಂದು ತಿಳಿಸಿದರು.

ಪ್ರಸ್ತುತ ವೈಜ್ಞಾನಿಕ ಸಮೂಹ ಒಂದು ಕಡೆ, ಇನ್ನೊಂದೆಡೆ ಪ್ರಾಜ್ಞರು ಜ್ಯೋತಿಷ್ಯ ಶಾಸ್ತ್ರದಲ್ಲಿ ಅವಲಂಬಿತರಾಗಿದ್ದಾರೆ. ಸರ ಹೊತ್ತಿನಲ್ಲಿ ಹುಟ್ಟಿದ ಮಗುವನ್ನು ನೋಡುವ ವಿಚಾರದಲ್ಲಿ ಜ್ಯೋತಿಷ್ಯದ ಮೊರೆ ಹೋಗುತ್ತಾರೆ. ಇದು ಜ್ಯೋತಿಷ್ಯದ ಮೇಲಿನ ನಂಬಿಕೆ ಆಗಿದೆ ಎಂದು ಹೇಳಿದರು.

ಹಿಂದೆ ಮಡಿವಂತಿಕೆಯಿಂದ ಕೂಡಿದ್ದ ಜ್ಯೋತಿಷ್ಯ ಶಾಸ್ತ್ರ ಈಗ ಅದರಿಂದ ಹೊರ ಬಂದಿದ್ದು, ಜಾತಿ, ಧರ್ಮಕ್ಕೆ ಸೀಮಿತವಾಗಿಲ್ಲ. ಅದು ನಂಬಿರುವ ಜನರಿಗೆ ನಿಖರ ಮತ್ತು ಸ್ಪಷ್ಟವಾದ ಭವಿಷ್ಯ ತಿಳಿಸಿ ಬೆಳಕು ಚೆಲ್ಲುವ ಕೆಲಸ ಮಾಡಲಾಗುತ್ತಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೃತಿಯ ಸಂಗ್ರಹಕಾರ ಸಿ.ಕೆ. ಆನಂದತೀರ್ಥಾಚಾರ್, ಜನನದಿಂದ ಮರಣದವರೆಗೆ ಜ್ಯೋತಿಷ್ಯದ ಅಗತ್ಯವಿದೆ. ಸಕಾಲದಲ್ಲಿ ಜೀವನದ ಭವಿಷ್ಯದ ಬಗ್ಗೆ ತಿಳಿಯುವುದರಿಂದ ಒಳಿತನ್ನು ಕಾಣಬಹುದಲ್ಲದೇ, ಮುಂದಾಗುವ ಅಪಾಯದಿಂದ ಪಾರಾಗಬಹುದಾಗಿದೆ. ಜಾತಿ, ಭೇದ ಇಲ್ಲದೇ ಜ್ಯೋತಿಷ್ಯ ಕಲಿಯಬಹುದು ಎಂದರು.

ಪ್ರತಿಷ್ಠಾನದ ಅಧ್ಯಕ್ಷ ಎಂ. ಗದಿಗೆಪ್ಪಯ್ಯ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಜ್ಯೋತಿಷ್ಯ ಹಾಗೂ ಜ್ಯೋತಿಷ್ಯ ಬೋಧನೆಗಳ ಒಕ್ಕೂಟದ ಕಾರ್ಯದರ್ಶಿ ಬಿ. ಗಜೇಂದ್ರ, ಖಜಾಂಚಿ ಡಾ. ಅನಂತರಾಘವನ್, ವಸಿಷ್ಠ ಸಂಸ್ಥಾನ್ ಅಧ್ಯಕ್ಷ ಡಾ. ಕುಮಾರ್ ವಸಿಷ್ಠ, ಹುಬ್ಬಳಿಯ ಜ್ಯೋತಿರ್ವಿಜ್ಞಾನ ಮಾಸ ಪತ್ರಿಕೆ ಸಂಪಾದಕ ಗಣೇಶ್ ಹೆಗಡೆ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಮತ್ತಿತರರು ಮುಖ್ಯ ಅತಿಥಿಗಳಾಗಿದ್ದರು.

ಮಂಜುನಾಥ ಸ್ವಾಮಿ ಅವರಿಂದ ವೇದಘೋಷ ನಡೆಯಿತು. ಟಿ. ಪರಮೇಶ್ವರಾಚಾರ್ ಸ್ವಾಗತಿಸಿದರು. ಸಾಲಿಗ್ರಾಮ ಗಣೇಶ್ ಶೆಣೈ ನಿರೂಪಿಸಿದರು.

### ಟಿವಿ ಜ್ಯೋತಿಷ್ಯ ಬೇಡ

ಟಿ.ವಿ. ಜ್ಯೋತಿಷ್ಯದ ಪ್ರಭಾವ ಹೆಚ್ಚಾಗಿದೆ. ಇದು ನಿಜವಾದ ಜ್ಯೋತಿಷ್ಯ ಶಾಸ್ತ್ರವೇ ಅಲ್ಲ. ಇಂತಹ ಬೂಟಾಟಿಕೆಯ ಜ್ಯೋತಿಷ್ಯಕ್ಕೆ ಜನರು ಮಾರು ಹೋಗಬಾರದು. ವಿಷ ಬೀಜ ಬಿತ್ತುವ ಕೆಲಸವೂ ಆಗಬಾರದು. ಕೇವಲ ಜನರ ಮನಸ್ಸನ್ನು ತೃಪ್ತಿಪಡಿಸುವ ಭವಿಷ್ಯವು ನಿಜವಾದ ಜ್ಯೋತಿಷ್ಯವಲ್ಲ. ಭವಿಷ್ಯದ ಹಿತವನ್ನು ತಿಳಿಸುವಂತಹ ಜ್ಯೋತಿಷ್ಯ ವಿಜ್ಞಾನವನ್ನು ಅರಿತಿರುವ ಪಂಡಿತರ ಜ್ಯೋತಿಷ್ಯವೇ ನಿಜವಾದ ಜ್ಯೋತಿಷ್ಯ.

– ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ

### ಜ್ಯೋತಿಷ್ಯ ದೂಷಣೆ ಸಲ್ಲ

ಕೊರೊನಾ, ಭೂಕಂಪನ ಸೇರಿದಂತೆ ಪ್ರಕೃತಿ ವಿಕೋಪ, ಅಪಾಯ, ಅನಾಹುತಗಳ ಬಗ್ಗೆ ಎಚ್ಚರಿಕೆಯ ಮುನ್ಸೂಚನೆ ನೀಡಿದರೆ, ಜ್ಯೋತಿಷ್ಯವನ್ನೇ ದೂಷಿಸುವುದು, ಟೀಕಿಸುವುದು ಸರಿಯಲ್ಲ. ಮಕರ ಸಂಕ್ರಮಣದ ಮಾರನೇ ದಿನ ಕರಿದಿನ ಮತ್ತು ಕೆಟ್ಟ ದಿನ ಅಂದು ಪ್ರಯಾಣ ಮಾಡಬಾರದು. ಅಂತೆಯೇ ಸಂಕ್ರಮಣದ ದಿನ ಪ್ರಯಾಣಿಸಿದ ಮಹಿಳೆಯರು ದುರಂತ ಸಾವು ಕಂಡಿದ್ದು ಬೇಸರದ ಸಂಗತಿ.

– ಸಿ.ಕೆ. ಆನಂದತೀರ್ಥಾಚಾರ್

## ಹರಿಹರ : ಸ್ವಸ್ಥಾನ ತಲುಪದ ಚುನಾವಣಾ ಪರಿಕರಗಳು



ಹರಿಹರ, ಫೆ.2- ಗ್ರಾಮ ಪಂಚಾಯ್ತಿ ಚುನಾವಣೆ ನಡೆದು ತಿಂಗಳು ಕಳೆದರೂ, ಚುನಾವಣೆಗೆಂದು ಪೇರಿಸಲಾದ ಪರಿಕರಗಳು ಇನ್ನೂ ತಮ್ಮ ಸ್ವಸ್ಥಾನ ತಲುಪದೇ ತಹಶೀಲ್ದಾರ್ ಕಚೇರಿ ಆವರಣದಲ್ಲಿಯೇ ಠಿಕಾಣಿ ಹೂಡಿ ಬಿಟ್ಟಿವೆ....

ಚುನಾವಣಾ ಪರಿಕರಗಳು ಹಾಳಾಗದಂತೆ ಅವನ್ನು ಸುಸಜ್ಜಿತ ಕೊಠಡಿಯಲ್ಲಿ ಜೋಪಾನ ವಾಗಿ ಶೇಖರಿಸುವ ಅಗತ್ಯವಿದ್ದು, ಸಾರ್ವಜನಿಕರು ಓಡಾಡುವ ಸ್ಥಳದಲ್ಲಿಯೇ ಇಡಲಾಗಿದೆ. ಈ ಸಂಬಂಧ ತಹಶೀಲ್ದಾರ್ ಅವರು ಸೂಕ್ತ ಕ್ರಮ ಕೈಗೊಳ್ಳಲಿ ಎಂದು ಸ್ಥಳೀಯರ ಒತ್ತಾಯವಾಗಿದೆ.

ಕಚೇರಿಗೆ ಪ್ರತಿನಿತ್ಯ ಕಾರ್ಯನಿಮಿತ್ತ ನೂರಾರು ಜನರು ಭೇಟಿ ನೀಡುತ್ತಿರುತ್ತಾರೆ. ಆದರೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲವಾಗಿದೆ. ಬಂದವರು ತಮ್ಮ ವಾಹನಗಳನ್ನು ನಿಲ್ಲಿಸಲು ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕೂಡ ಇಲ್ಲಿ ಇಲ್ಲ. ರಸ್ತೆಯಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸುವುದರಿಂದ ವಾಹನಗಳಿಗೆ ಹಾಗೂ ಓಡಾಡುವ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಈ ಕುರಿತು ಸಹ ತಾಲ್ಲೂಕು ಆಡಳಿತ ಗಮನ ಹರಿಸಬೇಕಿದೆ ಎನ್ನುವುದು ಸಾರ್ವಜನಿಕರ ಅಹವಾಲಾಗಿದೆ. ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಈ ಸಂಬಂಧ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಸರ್ಕಾರಕ್ಕೆ ಮನವಿ ಮಾಡಿದ್ದು, ಹಣ ಬಿಡುಗಡೆ ನಂತರ ವ್ಯವಸ್ಥೆ ಕಲ್ಪಿಸಲಾಗುವುದು ಎಂದಿದ್ದಾರೆ.

## ನಗರದಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ದಾವಣಗೆರೆ ಫೆ. 2 - ನಾಡಿದ್ದು ದಿನಾಂಕ ಬೆಳಿಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ ಬಾಡಾಕ್ರಾಸ್, ಆವರಗೆರೆ, ಮಹಾಲಕ್ಷ್ಮಿ ಲೇಔಟ್, ಉತ್ತಮ್‌ಚಂದ್ ಲೇಔಟ್, ಜಿ.ಎಮ್ ಇಂಡಸ್ಟ್ರೀಸ್, ಅಪೂರ್ವ ರೆಸಾರ್ಟ್, ಜೈನ್ ಕಾಲೇಜ್, ಆಂಜನೇಯ ಕಾಟನ್ ಮಿಲ್ ಮತ್ತು ಆವರಗೆರೆ ಇಂಡಸ್ಟ್ರೀಸ್‌ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

## ಬಿಜೆಪಿ ಯುವ ಮೋರ್ಚಾದಿಂದ ಸ್ವಚ್ಛತಾ ಕಾರ್ಯಕ್ರಮ



ದಾವಣಗೆರೆ, ಫೆ.2 - ದಾವಣಗೆರೆ ನಗರದ ಕೆ. ಆರ್. ರಸ್ತೆಯಲ್ಲಿರುವ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯ ಆವರಣದಲ್ಲಿ ದಾವಣಗೆರೆ ಜಿಲ್ಲಾ ಬಿಜೆಪಿ ಯುವ ಮೋರ್ಚಾದ ವತಿಯಿಂದ ಸ್ವಚ್ಛತಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಯಿತು.

ಈ ಸಂಧರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶಿವಪ್ರಕಾಶ್ ಆರ್ ಎಲ್, ಉತ್ತರ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್, ಜಿಲ್ಲಾ ಉಪಾಧ್ಯಕ್ಷ ಕಿರಣ್ ಟಿ.ಎನ್, ವಿನಯ್ ಪೈಲ್ವಾನ್, ಪದಾಧಿಕಾರಿಗಳಾದ ಪ್ರಶಾಂತ್, ತಿಲಕ್, ಸಂತೋಷ್ ಅನಿಲ್ ಚಂದ್ರಶೇಖರ್, ರಾಜು, ಸಚಿನ್, ಹರೀಶ್ ಶಾಮನೂರು, ಶಿವು ಶಾಮನೂರು, ಪ್ರದೀಪ್, ವರುಣ್, ಅನಿಲ್, ವಿವೇಕ್, ಇನ್ನಿತರರು ಉಪಸ್ಥಿತರಿದ್ದರು.

## ನಾಳೆ ಶ್ರೀ ಮಹಾಂತ ಸ್ವಾಮೀಜಿ ಪುಣ್ಯಸ್ಮರಣೋತ್ಸವ



ದಾವಣಗೆರೆ, ಫೆ.2 - ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಲಿಂಗೈಕ್ಯ ಡಾ॥ ಮಹಾಂತ ಶಿವಾಚಾರ್ಯ ಮಹಾಸ್ವಾಮೀಜಿಯವರ 8ನೇ ವರ್ಷದ ಪುಣ್ಯಸ್ಮರಣೋತ್ಸವವನ್ನು ನಾಡಿದ್ದು ದಿನಾಂಕ 4ರ ಗುರುವಾರ ಹರಿಹರದ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಜಗದ್ಗುರುಗಳವರ ಕರ್ತೃ ಗದ್ದುಗೆಗೆ ಬೆಳಿಗ್ಗೆ 5 ಘಂಟೆಗೆ ಮಹಾರುದ್ರಾಭಿಷೇಕ, 9 ಘಂಟೆಗೆ ವಿಶೇಷ ಪೂಜೆ, ಮಹಾಮಂಗಳಾರತಿ, 10 ಕ್ಕೆ ದೊಡ್ಡಬಾತಿ ಗ್ರಾಮದ ಸಮಾಜ ಬಾಂಧವರಿಂದ ಜಗದ್ಗುರು ಮಹಾಂತ ಶ್ರೀಗಳ ಪಾದುಕೆಯ ಮತ್ತು ಭಾವಚಿತ್ರ ಪಲ್ಲಕ್ಕಿ ಉತ್ಸವ ಜರುಗುವುದು. ನಂತರ ಬೆಳಗ್ಗೆ 11-00ಘಂಟೆಗೆ ಧರ್ಮ ಸಭೆ ಕಾರ್ಯಕ್ರಮವನ್ನು ಏರ್ಪಾಡಾಗಿದೆ.

## ನಾಳೆ ಶ್ರೀ ದುರ್ಗಾ ಪೂಜೆ ದುರ್ಗಾ ದೀಪ ನಮಸ್ಕಾರ

ದಾವಣಗೆರೆ, ಜ.2- ವಿಶ್ವ ಮಧ್ವ ಮಹಾಪರಿಷತ್, ಬೆಂಗಳೂರು ಮತ್ತು ವಿಶ್ವ ಮಧ್ವ ಮಹಾಪರಿಷತ್, ದಾವಣಗೆರೆ ಇವರುಗಳ ಸಹಯೋಗದಲ್ಲಿ ಲೋಕ ಕಲ್ಯಾಣಾರ್ಥವಾಗಿ ನಾಡಿದ್ದು ದಿನಾಂಕ 4 ರ ಗುರುವಾರ ಸಂಜೆ 5 ಗಂಟೆಗೆ ನಗರದ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ದುರ್ಗಾಪೂಜೆ ಹಾಗೂ ದುರ್ಗಾ ದೀಪ ನಮಸ್ಕಾರ ಕಾರ್ಯಕ್ರಮ ನಡೆಯಲಿದೆ.

ನಾಡಿನ ಪ್ರಸಿದ್ಧ ವಿದ್ವಾಂಸರುಗಳಿಂದ ಹಮ್ಮಿಕೊಳ್ಳಲಾಗಿರುವ ದುರ್ಗಾ ಪೂಜೆಯಿಂದ ಸಕಲ ದೋಷಗಳ ನಿವಾರಣೆ, ಶಾಂತಿ, ನೆಮ್ಮದಿ, ಎಲ್ಲಾ ರೀತಿ ಸಮಸ್ಯೆಗಳು ಪರಿಹರಿಸಲ್ಪಡುತ್ತವೆ.

## ಇನ್ನೂ ಸ್ಥಾಪನೆಯಾಗದ ವಿಮಾನ ನಿಲ್ದಾಣ: ಸಿದ್ದೇಶ್ವರ ರಾಜೀನಾಮೆಗೆ ಆಗ್ರಹ

ದಾವಣಗೆರೆ, ಫೆ.2- ಸಮೀಪದ ಹೆಬ್ಬಾಳು ಬಳಿ ವಿಮಾನ ನಿಲ್ದಾಣಕ್ಕಾಗಿ ಕೇಂದ್ರದಿಂದ ಮಂಜೂರಾತಿ ಮಾಡಿಸಿಕೊಡುವಂತೆ ದಾವಣಗೆರೆ ಎರಡನೇ ರಾಜಧಾನಿ ಹೋರಾಟ ಸಮಿತಿ ಈ ಹಿಂದೆ ಕೇಂದ್ರ ವಿಮಾನಯಾನ ಖಾತೆ ಸಚಿವರಾಗಿದ್ದ ಸಂಸದ ಜಿ.ಎಂ. ಸಿದ್ದೇಶ್ವರ ಅವರಿಗೆ ಮನವಿ ಮಾಡಿದ್ದು, ಸಂಸದರು ಆಗುವುದಿಲ್ಲ ಎಂದು ಖಾರವಾಗಿಯೇ ತಿಳಿಸಿದ್ದರು.

ವಿಪರ್ಯಾಸವೆಂದರೆ ಉತ್ತರ ಪ್ರದೇಶದಲ್ಲಿ ಈಗಾಗಲೇ 18 ವಿಮಾನ ನಿಲ್ದಾಣಗಳಾಗಿದ್ದು, ಸೇವೆ ನೀಡುತ್ತಾ ಬಂದಿವೆ ಹಾಗೂ 9 ನಿಲ್ದಾಣಗಳ ಕಾರ್ಯವು ತ್ವರಿತವಾಗಿ ನಡೆಯುತ್ತಿದೆ. ನಮ್ಮಲ್ಲಿ ವಿಮಾನ ನಿಲ್ದಾಣ ಆಗದಿರುವುದಕ್ಕೆ ಕಾರಣವೇನೆಂದು ಸಂಸದರು ಉತ್ತರ ನೀಡಲಿ. ಇಲ್ಲವಾದಲ್ಲಿ ಸಂಸದರ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿ ಹೋರಾಟ ಸಮಿತಿ ಅಧ್ಯಕ್ಷ ಎಂ. ಎಸ್.ಕೆ. ಶಾಸ್ತ್ರಿ ಆಗ್ರಹಿಸಿದ್ದಾರೆ.

ಸಮಿತಿಯ ಪದಾಧಿಕಾರಿಗಳಾದ ಕಳಸಪ್ಪ ಚನ್ನಬಸಪ್ಪ, ಚಂದ್ರಶೇಖರ ದಾನಪ್ಪ, ಎಂ. ಪ್ರೇಮಲತಾ, ಪೂಜಾರ್ ರಾಜೇಂದ್ರ ಬಂಗೇರಾ, ಎಲ್.ಎಸ್. ಹೇಮಾವತಿ ಇನ್ನಿತರರು ಆಗ್ರಹಿಸಿದ್ದಾರೆ.

# ದಕ್ಷತೆಯಿಂದ ಕೆಲಸ ಮಾಡಿದಾಗ ಜನರು ಸಹಕಾರ ನೀಡುವುದರಲ್ಲಿ ಅನುಮಾನವಿಲ್ಲ

### ಹರಿಹರದ ಕಾರ್ಯಕ್ರಮದಲ್ಲಿ ಪೊಲೀಸ್ ಡಿವೈಎಸ್ಪಿ ನರಸಿಂಹರಾಜು ಪ್ರತಿಪಾದನೆ



ಹರಿಹರ, ಫೆ.2- ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಿಕೊಂಡು ಹೋಗುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಬಹುಮುಖ್ಯವಾಗಿದ್ದು, ದಕ್ಷತೆಯಿಂದ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಯಶಸ್ವಿಯಾದ ಸಿಪಿಐ ಶಿವಪ್ರಸಾದ್, ಪಿಎಸ್ಐ ಶೈಲಾಶ್ರೀ ಶ್ಲಾಘನೀಯ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಹೇಳಿದರು.

ನಗರದ ಪೊಲೀಸ್ ಠಾಣೆಯ ಆವರಣದಲ್ಲಿ ವರ್ಗಾವಣೆ ಗೊಂಡಿರುವ ಸಿಪಿಐ ಶಿವಪ್ರಸಾದ್, ಪಿಎಸ್ಐ ಶೈಲಾಶ್ರೀ ಹಾಗೂ ಪಿಎಸ್ಐ ಆಗಿ ಬಡ್ತಿ ಹೊಂದಿದ ಶ್ರೀನಿವಾಸ್ ಅವರಿಗೆ ಸನ್ಮಾನ ಹಾಗೂ ಬೀಳ್ಕೊಡುಗೆ ಮತ್ತು ನಗರ ಠಾಣೆಗೆ ಸಿಪಿಐ ಆಗಿ ಬಂದಿರುವ ಸತೀಶ್ ಕುಮಾರ್, ಪಿಎಸ್ಐ ಬಸವರಾಜ್ ತೆಲಿ ಅವರನ್ನು ಸ್ವಾಗತಿಸುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಿಪಿಐ ಶಿವಪ್ರಸಾದ್ ಅವರು ಕರ್ತವ್ಯದ ಮೇಲೆ ನಗರಕ್ಕಾಮಿಸಿದ ಸಂದರ್ಭದಲ್ಲಿ ಒಂದು ಸಣ್ಣ ಘಟನೆ ನಡೆದು 144 ನೇ ಸೆಕ್ಷನ್ ಜಾರಿ ಮಾಡಲಾಯಿತು. ಆ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಉತ್ತಮವಾಗಿ ನಿರ್ವಹಿಸಿದ ಇಲಾಖೆಯ ಅಧಿಕಾರಿಗಳು ಶ್ರಮ ವಹಿಸಿ ಘಟನೆಯನ್ನು ತಹಬಂದಿಗೆ ತಂದರು. ಕೊರೊನಾ ತಡೆಗಟ್ಟುವಿಕೆ ತಾಲ್ಲೂಕು ಆಡಳಿತ, ನಗರಸಭೆ, ಆರೋಗ್ಯ ಇಲಾಖೆ ಜೊತೆಗೆ ಪೊಲೀಸ್ ಇಲಾಖೆಗೆ ಒಂದು ದೊಡ್ಡ ಸವಾಲಿನ ಕಾರ್ಯವಾಗಿತ್ತು. ವಾಸನ, ನಂದಿಗುಡಿ ಗ್ರಾಮದ ಮೊರಾರ್ಜಿ ಶಾಲೆಯಲ್ಲಿ ಹೊರ ರಾಜ್ಯದ ಜನರು ಉಳಿದುಕೊಳ್ಳಲು ವ್ಯವಸ್ಥೆ ಮಾಡುವಾಗ ಸ್ಥಳೀಯ ಗ್ರಾಮಸ್ಥರು ವಿರೋಧ ಮಾಡಿದರು. ಅದನ್ನು ಸಮರ್ಥವಾಗಿ ಶಿವಪ್ರಸಾದ್ ತಂಡವು ನಿರ್ವಹಿಸಿದ್ದು, ಇತರೆ ಅಧಿಕಾರಿಗಳಿಗೆ ಮಾರ್ಗದರ್ಶನವಾಯಿತು ಎಂದರು.

ಡಿವೈಎಸ್ಪಿ ನರಸಿಂಹರಾಜು ಮಾತನಾಡಿ, ಕಾನೂನು ಸುವ್ಯವಸ್ಥೆ ಮತ್ತು ಶಾಂತಿ ಹದಗೆಡದಂತೆ ನೋಡಿಕೊಂಡು ಕರ್ತವ್ಯವನ್ನು ಮಾಡುವಾಗ ಕೆಲವು ಸಣ್ಣಪುಟ್ಟ ವ್ಯತ್ಯಾಸ ಆಗುವುದು ಸಹಜ. ಆದರೆ ದಕ್ಷತೆಯಿಂದ ಕೆಲಸ ಮಾಡಿದಾಗ ಜನರು ಸಹ ಉತ್ತಮ ರೀತಿಯಲ್ಲಿ ಸಹಕಾರ ನೀಡುವುದರಲ್ಲಿ ಯಾವುದೇ ಅನುಮಾನಗಳಿಲ್ಲ ಎಂದರು.

ಗಿರಿಯಮ್ಮ ಕಾಲೇಜು ನಿವೃತ್ತ ಪ್ರಾಂಶುಪಾಲ ಎಸ್.ಹೆಚ್. ಪ್ಯಾಟಿ ಮಾತನಾಡಿ, ಕೆಲವೊಂದು ದಕ್ಷ ಅಧಿಕಾರಿಗಳಿಂದ ಇಲಾಖೆಗೆ ಸಮಾಜದಲ್ಲಿ ಗೌರವ ಇದೆ. ಇಲಾಖೆಯ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವಾಗ ರಾಜಕಾರಣಿಗಳು ಹಸ್ತಕ್ಷೇಪ ಮಾಡದಿದ್ದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ತಮ್ಮ ಸೇವೆಯನ್ನು ಸಲ್ಲಿಸಲು ಅಧಿಕಾರಿಗಳಿಗೆ ದಾರಿಯಾಗಲಿದೆ ಎಂದು ಹೇಳಿದರು.

ಸಿಪಿಐ ಶಿವಪ್ರಸಾದ್, ನಗರ ಠಾಣೆಯ ಸಿಪಿಐ ಸತೀಶ್ ಕುಮಾರ್, ಮಲೇಬೆನ್ನೂರು ಠಾಣೆ ಪಿಎಸ್ಐ ವೀರಬಸಪ್ಪ, ಗುತ್ತೂರು ಗ್ರಾಮಾಂತರ ಠಾಣೆ ಪಿಎಸ್ಐ ಡಿ. ರವಿಕುಮಾರ್, ನಗರಸಭೆ ಪೌರಾಯುಕ್ತ ಉದಯ ಕುಮಾರ್ ಇನ್ನಿತರರು ಮಾತನಾಡಿದರು.

ಪಿಎಸ್ಐ ಶೈಲಾಶ್ರೀ, ಶ್ರೀನಿವಾಸ್, ನಿಂಗನಗೌಡ್ರು, ಸಿಬ್ಬಂದಿಗಳಾದ ಡಿ.ಟಿ. ಶ್ರೀನಿವಾಸ್, ಸತೀಶ್, ಲಿಂಗರಾಜ್, ಮಂಜುನಾಥ, ಮುರುಳೀಧರ್, ಸಿದ್ದಪ್ಪ ಇನ್ನಿತರರು ಹಾಜರಿದ್ದರು.

## ಹರಪನಹಳ್ಳಿ : ವೀರಶೈವ ಮಹಾಸಭಾ ಚುನಾವಣೆ ; 22 ನಾಮಪತ್ರಗಳು ಸಲ್ಲಿಕೆ



ಹರಪನಹಳ್ಳಿ, ಫೆ.2- ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಘಟಕದ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಿಗದಿಯಾಗಿದ್ದು, ಮಂಗಳವಾರ ಈ ಪೈಕಿ ಒಟ್ಟು 22 ನಾಮಪತ್ರಗಳು ಸಲ್ಲಿಕೆಯಾಗಿವೆ.

ಪಟ್ಟಣದ ಆರ್‌ಎಸ್‌ಎನ್ ಶಾಲೆಯಲ್ಲಿ ಚುನಾವಣಾಧಿಕಾರಿ ಸಿ.ಎಂ. ಕೊಟ್ರಯ್ಯ ಅವರು ನಾಮಪತ್ರಗಳನ್ನು ಸ್ವೀಕರಿಸಿ ಮಾತನಾಡಿ, ಇಂದಿನ ನಾಮಪತ್ರ ಗಳಲ್ಲಿ ಅಧ್ಯಕ್ಷ ಸ್ಥಾನಕ್ಕೆ 1, ಕಾರ್ಯಕಾರಿ ಸಮಿತಿಗೆ 14 ಪುರುಷರು, 7 ಮಹಿಳೆಯರು ಸೇರಿ ಒಟ್ಟು 22 ನಾಮಪತ್ರಗಳು ಸಲ್ಲಿಕೆಯಾಗಿವೆ. ಫೆ.3 ರಂದು ನಾಮಪತ್ರಗಳ ಪರೀಶೀಲನೆಯಾಗಲಿದ್ದು, ಫೆ.6 ನಾಮಪತ್ರ ವಾಪಸ್ ಪಡೆಯುವುದು ಹಾಗೂ ಫೆ.14 ರಂದು ಚುನಾವಣೆ ನಡೆಯಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಂ. ರಾಜಶೇಖರ, ಟಿ.ಎಚ್. ಎಂ. ಮಲ್ಲಿಕಾರ್ಜುನ, ಮಟ್ಟಿ ಮೃತ್ಯುಂಜಯ, ಎಚ್. ಮಲ್ಲಿಕಾರ್ಜುನ, ಕಾನಹಳ್ಳಿ ರುದ್ರಪ್ಪ, ಎಂ.ಟಿ. ಬಸವನಗೌಡ, ಎಂ. ಅಜ್ಜಣ್ಣ, ಅಂಬ್ಲಿ ಮಂಜುನಾಥ, ಕೆ.ಎಂ. ಗುರುಸಿದ್ದಯ್ಯ, ಬಸವರಾಜ, ಪ್ರಕಾಶಗೌಡ, ಪುಷ್ಪ ದಿವಾಕರ, ಅಕ್ಕಮಹಾದೇವಿ, ಪ್ರಭಾ ಅಜ್ಜಣ್ಣ, ಮಂಜುಳಾ, ಎಂ. ಶೋಭ ಚಂದ್ರಶೇಖರ, ಉಮಾದೇವಿ, ವೀಣಾ, ಪದ್ಮಾವತಿ, ಉಪಸ್ಥಿತರಿದ್ದರು.


**ಅಖಿಲ ಕರ್ನಾಟಕ ಬೇಡಜಂಗಮ ಸಂಘಟನೆಗಳ ಒಕ್ಕೂಟ (ರಿ.)**

**ಬೇಡಜಂಗಮರ ಸಂವಿಧಾನಬದ್ಧ ಹಕ್ಕೊತ್ತಾಯಕ್ಕಾಗಿ ಹೋರಾಟ**

ಅಖಿಲ ಕರ್ನಾಟಕ ಬೇಡಜಂಗಮ ಸಂಘಟನೆಗಳ ಒಕ್ಕೂಟ (ರಿ) ವತಿಯಿಂದ 'ಬೇಡಜಂಗಮ ಜಾತಿ ಪ್ರಮಾಣ ಪತ್ರ'ಕ್ಕಾಗಿ **ಶ್ರೀಯುತ ಬಿ.ಡಿ ಹಿರೇಮಠ** ಅವರ ನೇತೃತ್ವದಲ್ಲಿ ದಿನಾಂಕ 07.02.2021 ರಂದು ಬೀದರ್ ಜಿಲ್ಲೆಯ

**'ಬಸವ ಕಲ್ಯಾಣದಲ್ಲಿ ಬೇಡಜಂಗಮರ ಬೃಹತ್ ಸಮಾವೇಶ'** ವನ್ನು

ಏರ್ಪಡಿಸಲಾಗಿದೆ. ಈ ಸಮಾವೇಶದಲ್ಲಿ ಜಂಗಮರು ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿ ಸರ್ಕಾರದ ಕಣ್ಣು ತೆರೆಸಬೇಕಾಗಿರುತ್ತದೆ. ಆದ್ದರಿಂದ ಈ ಸಮಾವೇಶದಲ್ಲಿ ಜಂಗಮ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಂವಿಧಾನಾತ್ಮಕ ಹಕ್ಕನ್ನು ಪಡೆಯುವ ಹೋರಾಟಕ್ಕೆ ಕೈ ಜೋಡಿಸಲು ಕೇಳಿಕೊಳ್ಳುತ್ತೇವೆ.

**ಹರಿಹರ ತಾಲ್ಲೂಕು ಘಟಕ**

ಜೈ ಬೇಡಜಂಗಮ — ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : — ಜೈ ಬೇಡಜಂಗಮ

**ನಂದಿಗಾವಿ ತಿಪ್ಪೇಸ್ವಾಮಿ,** ಹರಿಹರ ತಾಲ್ಲೂಕು ಕಾರ್ಯದರ್ಶಿ ಮೊ. 9448233997

**ಬಿ.ಎಂ.ಹಾಲಸ್ವಾಮಿ,** ಹರಿಹರ ತಾಲ್ಲೂಕು ಸಂಚಾಲಕರು. 9448814413

**ಬಿ.ಎಂ.ಜಗದೀಶ್ವರ ಸ್ವಾಮಿ,** 9448102682, **ಉಮೇಶ್ ಮಠದ್.** 7019426890

# ರಾಣೇಬೆನ್ನೂರಿನಲ್ಲಿ ಸ್ವಚ್ಛತಾ ದಿನಾಚರಣೆ



## ಕಸ ಗುಡಿಸಿದ ನ್ಯಾಯಾಧೀಶರು

ರಾಣೇಬೆನ್ನೂರು, ಫೆ.2- ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ ಅಂಗವಾಗಿ ಇಲ್ಲಿನ ನ್ಯಾಯಾಧೀಶರು ನ್ಯಾಯಾಲಯದ ಆವರಣ ಹಾಗೂ ಎದುರಿನ ಹೆದ್ದಾರಿಯಲ್ಲಿ ಕಸಗುಡಿಸಿ ಸ್ವಚ್ಛತಾ ದಿನಾಚರಣೆ ಆಚರಿಸಿದರು.

ನ್ಯಾಯಾಧೀಶರಾದ ಅಣ್ಣುಗೌಡ ಪಾಟೀಲ್, ಜೆ. ಯೋಗೇಶ್, ಜಿ.ವಿ. ಕುಲಕರ್ಣಿ, ಶರವಣನ್, ಪೌರಾಯುಕ್ತ ಡಾ. ಮಹಾಂತೇಶ್, ವಕೀಲರ ಸಂಘದ ಅಧ್ಯಕ್ಷ ಬಿ.ಎಚ್. ಬುರಡಿಕಟ್ಟಿ, ನ್ಯಾಯಾಲಯ ಹಾಗೂ ನಗರಸಭೆ ಸಿಬ್ಬಂದಿ ಭಾಗವಹಿಸಿದ್ದರು.

# ಕೇಂದ್ರದ ಆಯ-ವ್ಯಯ ಉತ್ತಮ : ಅಥಣಿ



ದಾವಣಗೆರೆ,ಫೆ.2- ಕೇಂದ್ರ ಹಣಕಾಸು ಖಾತೆ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ನಿನ್ನೆ ಮಂಡಿಸಿದ ಆಯ-ವ್ಯಯ ಉತ್ತಮವಾಗಿದೆ ಎಂದು ನಗರದ ಹಿರಿಯ ಕೈಗಾರಿಕೋದ್ಯಮಿಯೂ ಆಗಿರುವ ಲೆಕ್ಕಪರಿಶೋಧಕ ಅಥಣಿ ವೀರಣ್ಣ ಪ್ರತಿಕ್ರಿಯಿಸಿದ್ದಾರೆ.

ತೆರಿಗೆ ಪಾವತಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿದ್ದು, ಹೊಸ ತೆರಿಗೆ ವಿಧಿಸಿಲ್ಲ. ಆದಾಯ ತೆರಿಗೆಯಲ್ಲಿ ಹೆಚ್ಚುವರಿ ಹೊರೆ ಹಾಕಿಲ್ಲ. ಜಿ.ಎಸ್.ಟಿ ತೆರಿಗೆ, ರಿಟರ್ನ್ ಸಲ್ಲಿಕೆಯಲ್ಲಿ ಹಿರಿಯ ನಾಗರಿಕರಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದು ಅವರು ಹೇಳಿದ್ದಾರೆ.

ಆದಾಯ ತೆರಿಗೆದಾರರಿಗೆ ಅಗತ್ಯಬಿದ್ದರೆ ಹಿಂದಿನ ಲೆಕ್ಕ ಪತ್ರ ಪರಿಶೀಲಿಸುವ ಹೊಸ ನಿಯಮ ಜಾರಿಗೆ ತಂದಿರುವುದು ಉತ್ತಮ ಕ್ರಮವಾಗಿದೆ. ಅಸೆಸ್‌ಮೆಂಟ್ ವ್ಯತ್ಯಾಸವಾದಾಗ ಆದಾಯ ತೆರಿಗೆ ಇಲಾಖೆ ನಮ್ಮ ನಡುವೆ ತಕರಾರಿದ್ದಲ್ಲಿ ಡಿಸ್ಪ್ಯೂಟ್ ರೆಸುಲೇಷನ್ ಸಮಿತಿಗೆ ಅರ್ಜಿ ಸಲ್ಲಿಸಿ ಪರಿಹಾರ ಪಡೆಯಲು ಅವಕಾಶ ಕಲ್ಪಿಸಿರುವುದು ಸ್ವಾಗತಾರ್ಹ ಎಂದು ಅವರು ತಿಳಿಸಿದ್ದಾರೆ.

ಮುಂಬರುವ ದಿನಗಳಲ್ಲಿ ಚುನಾವಣೆ ನಡೆಯಲಿರುವ ರಾಜ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಕರ್ನಾಟಕಕ್ಕೆ ತಾರತಮ್ಯ ಮಾಡಲಾಗಿದೆ. ಕರ್ನಾಟಕಕ್ಕೆ ಮೆಟ್ರೋಗೆ 2ಎ, 2ಬಿ ಯೋಜನೆಗೆ ಹಣ ನೀಡಿದ್ದು ಬಿಟ್ಟರೆ ಯಾವುದೇ ಅನುದಾನ ನೀಡಿಲ್ಲ ಎಂದು ವೀರಣ್ಣ ಅವರು ಹೇಳಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕುವೆಂಪು ನಗರ, ಸಿದ್ದವೀರಪ್ಪ ಬಡಾವಣೆ, ಬಿ.ಐ.ಇ.ಟಿ. ಕಾಲೇಜು ರಸ್ತೆ, ಎಸ್.ಎಸ್. ಮಾಲ್, ಲಕ್ಷ್ಮೀ ಫ್ಲೋರ್ ಮಿಲ್ ಸುತ್ತ ಮುತ್ತ ಪ್ರದೇಶಗಳು. ಬಸವೇಶ್ವರ ಫೀಡರ್ ವ್ಯಾಪ್ತಿಯ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಶಾಂತಿನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡಕೆರೆ ಹಾಗೂ ಸುತ್ತಮುತ್ತ ಪ್ರದೇಶಗಳು, ವಿದ್ಯಾನಗರ ಮುಖ್ಯರಸ್ತೆಯ ಆಂಜನೇಯ ದೇವಸ್ಥಾನದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಬ್ರಾಹ್ಮಣ ಸಮಾಜದ ಯುವ ವೇದಿಕೆ ಅಧ್ಯಕ್ಷರಾಗಿ ಗೋಪಾಲ ಕೃಷ್ಣ ಆಯ್ಕೆ



ದಾವಣಗೆರೆ, ಫೆ.2- ನಗರದ ಬ್ರಾಹ್ಮಣ ಸಮಾಜ ಸೇವಾ ಸಂಘದ ನೂತನ ಯುವ ವೇದಿಕೆ ಅಧ್ಯಕ್ಷರಾಗಿ ಕೆ. ಎನ್. ಗೋಪಾಲಕೃಷ್ಣ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಬದರಿ ಪ್ರಸಾದ್, ಕಾರ್ಯದರ್ಶಿಯಾಗಿ ಶ್ರೀಧರ್ ಫಾಟೀಕರ್, ಸಹ ಕಾರ್ಯದರ್ಶಿಯಾಗಿ ವಿಕ್ರಮ್ ಜೋಷಿ, ಖಜಾಂಚಿ ಯಾಗಿ ಉತ್ಸವ್ ರಾವ್ ಆಯ್ಕೆಯಾಗಿದ್ದಾರೆ. ಬಿ.ಎಸ್. ಚೈತನ್ಯ, ಯೋಗೀಶ್ ಭಟ್, ಪ್ರದೀಪ್ ಸತ್ಯಸಂಧಾಚಾರ್, ಪ್ರಮೋದ್ ಭಾಗವತ್, ಕೆ.ಎಂ. ಶ್ರೀಕಾಂತ್, ದತ್ತಾತ್ರೇಯ ಜೋಶಿ ಸದಸ್ಯರುಗಳಾಗಿದ್ದಾರೆ.

# ನಗರದಲ್ಲಿ ಇಂದು ಕವನ ವಾಚನ ಸ್ಪರ್ಧೆ

ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಜಿಲ್ಲಾ ಸಮಿತಿ ಆಶ್ರಯದಲ್ಲಿ ಸ್ವ-ರಚಿತ ಕವನ ವಾಚನ ಸ್ಪರ್ಧೆ ಇಂದು ಸಂಜೆ 4.30ಕ್ಕೆ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಲಿದೆ. ಅಧ್ಯಕ್ಷತೆ : ಬಾ.ಮ. ಬಸವರಾಜಯ್ಯ. ಮುಖ್ಯ ಅತಿಥಿಗಳು : ಡಾ. ವಿಜಯಲಕ್ಷ್ಮಿ, ರಘುನಂದನ್ ಭಟ್ ನರೂರ.

# ಕೊರೊನಾ ಸೋಂಕು ಎಂಟು ತಿಂಗಳಲ್ಲೇ ಅತಿ ಕಡಿಮೆ

ನವದೆಹಲಿ, ಫೆ. 2 - ದೇಶದಲ್ಲಿ ಮಂಗಳವಾರ 8,635 ಹೊಸ ಕೊರೊನಾ ಸೋಂಕುಗಳು ಕಂಡು ಬಂದಿವೆ. ಇದು ಕಳೆದ ಎಂಟು ತಿಂಗಳಲ್ಲೇ ಅತಿ ಕಡಿಮೆಯಾಗಿದೆ. ಒಂಭತ್ತು ತಿಂಗಳ ನಂತರ ದೈನಂದಿನ ಕೊರೊನಾ ಸಾವುಗಳ ಸಂಖ್ಯೆ ನೂರಕ್ಕಿಂತ ಕಡಿಮೆ ಇದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಈಗ ಕೊರೊನಾ ಸೋಂಕಿಗೆ ಗುರಿಯಾದವರ ಸಂಖ್ಯೆ 1.07 ಕೋಟಿಗೆ ತಲುಪಿದೆ. 94 ಹೊಸ ಸಾವುಗಳೊಂದಿಗೆ ಒಟ್ಟು ಸಾವುಗಳ ಸಂಖ್ಯೆ 1.54 ಲಕ್ಷಕ್ಕೆ ತಲುಪಿದೆ.

1.04 ಕೋಟಿ ಜನರು ಇದುವರೆಗೂ ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ. ಒಟ್ಟಾರೆ ಶೇ.97.05ರಷ್ಟು ಜನರು ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಸೋಂಕಿತರ ಸಂಖ್ಯೆ ಈಗ 1.63 ಲಕ್ಷ ಆಗಿದೆ. ಸತತ 14 ದಿನಗಳಿಂದ ಸಕ್ರಿಯ ಸೋಂಕಿತರ ಸಂಖ್ಯೆ ಎರಡು ಲಕ್ಷಕ್ಕಿಂತ ಕಡಿಮೆ ಇದೆ.




ರಿನ್ಯೂ ಹೆಲ್ತ್ ಕೇರ್



ನರರೋಗ ಮತ್ತು ಸ್ತ್ರೀರೋಗ ಕ್ಲಿನಿಕ್

ಡಾ|| ಗುರುಪ್ರಸಾದ್ ಎಸ್. ಪೂಜಾರ್
ಎಂಬಿಬಿಎಸ್, ಎಂ.ಡಿ.(ಮೆಡಿಷನ್)., ಡಿ.ಎಂ.,(ನ್ಯೂರಾಲಜಿ)
ನರರೋಗ ತಜ್ಞರು
ನಿಕಟಪೂರ್ವ ಸಲಹಾ ವೈದ್ಯರು ಅಸ್ಟರ್ ಸಿಎಂಐ ಆಸ್ಪತ್ರೆ ಬೆಂಗಳೂರು
ಭೇಟಿಯ ಸಮಯ :
ಮ: 1.00 ರಿಂದ 2.00 ಗಂಟೆ ಹಾಗೂ ಸಾ: 6.30 ರಿಂದ 9.30 ಗಂಟೆ
ಭಾನುವಾರ ರಜೆ

ಡಾ|| ಸುಷ್ಮ ಬಿ. ನಾಡಗೌಡ
ಎಂಬಿಬಿಎಸ್., ಎಂ.ಎಸ್., (ಓ.ಬಿ.ಜಿ)
ಪ್ರಸೂತಿ ಮತ್ತು ಸ್ತ್ರೀ-ರೋಗ ತಜ್ಞರು
ನಿಕಟಪೂರ್ವ ಸಲಹಾ ವೈದ್ಯರು ನವಚೇತನ ಆಸ್ಪತ್ರೆ ಬೆಂಗಳೂರು
ಭೇಟಿಯ ಸಮಯ :
ಬೆ: 11.00 ರಿಂದ 2.00 ಗಂಟೆ ಹಾಗೂ ಸಾ: 6.00 ರಿಂದ 8.30 ಗಂಟೆ
ಭಾನುವಾರ ರಜೆ

ಸೌಲಭ್ಯಗಳು : ಇಇಜಿ, ಎನ್‌ಸಿಎಸ್, ವಿಇಪಿ, ಯುಎಸ್‌ಜಿ

ಸೇವೆಗಳು :
- ಕತ್ತುನೋವು
- ಬೆನ್ನುನೋವು
- ಸೊಂಟನೋವು
- ತಲೆಸುತ್ತು
- ನಡುಕ
- ಪಾರ್ಕಿನ್‌ಸನ್ ಕಾಯಿಲೆ
- ಮೂರ್ಛೆರೋಗ
- ಪಾರ್ಶ್ವವಾಯು
- ಸೆರೆಬ್ರಲ್ ಪಾಲಿ
- ಬೆನ್ನುಹುರಿ ಸಮಸ್ಯೆ

ಸೇವೆಗಳು :
- ಪ್ರಸವಪೂರ್ವ ಆರೈಕೆ
- ಜನನ ನಿಯಂತ್ರಣ
- ಬಂಜೆತನ ನಿವಾರಣೆ
- ಪಿಸಿಓಡಿ
- ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆ
- ಋತುಬಂಧ ಸಮಸ್ಯೆ
- ಮುಟ್ಟಿನ ಸಮಸ್ಯೆಗಳು
- ಅನಿಯಂತ್ರಿತ ಮೂತ್ರ

#681, 8ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ ತರಕಾರಿ ಮಳಿಗೆ ಹತ್ತಿರ, ಪಿ.ಜೆ.ಬಡಾವಣೆ, ದಾವಣಗೆರೆ– 577 002.
ಸಂಪರ್ಕಿಸಿ : 9632374088



ಹುಟ್ಟುಹಬ್ಬದ ಶುಭಾಶಯಗಳು



ದಿನಾಂಕ 2.1.2021ರಂದುತಮ್ಮ 62ನೇ ಜನ್ಮ ದಿನದ ಸಂಭ್ರಮದಲ್ಲಿರುವ
ಶ್ರೀ ಎನ್.ಟಿ. ಷಣ್ಮುಖಪ್ಪ ರೈಲ್ವೆ ಉಂಡೇಕರ್
ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
ಷಣ್ಮುಖಪ್ಪ ಅವರಿಗೆ ಆಯುರಾರೋಗ್ಯ ಭಾಗ್ಯ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಆಡಳಿತ ಮಂಡಳಿ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಹಾಗೂ ಸಿಬ್ಬಂದಿ ವರ್ಗ
ದಾವಣಗೆರೆ ಮರ್ಚಂಟ್ಸ್ ಕ್ಲಬ್
ದಾವಣಗೆರೆ



ಹತ್ತನೇ ವರ್ಷದ ಚಿರಸ್ಮರಣೆ



ದಿ. ಶ್ರೀ ಬಿ.ಕೆ. ಸಂತೋಷ್
ಜನನ: 15-12-1977
ನಿಧನ: 03-02-2011

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳು ಕಳೆದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ:

ಅಕ್ಕ: ಶ್ರೀಮತಿ ಬಿ.ಕೆ. ಅರ್ಚನಾ,
ಭಾವ: ಶ್ರೀ ಡಿ. ಮಹಾವೀರ್,
ಪ್ರೀತಿಯ ಸೊಸೆ: ಕು|| ಎಂ. ಲಕ್ಷ್ಮಿ,
ಪದ್ಮಾಂಬ ಕಾಂಪ್ಲೆಕ್ಸ್, ದಾವಣಗೆರೆ.
ಬೇತೂರು ಕುಟುಂಬ ವರ್ಗದವರು
ಶ್ರೀ ಮಹಾವೀರ ಆಟೋಮೊಬೈಲ್ಸ್, ರಾಣೇಬೆನ್ನೂರು.



ದಾವಣಗೆರೆಯಲ್ಲಿ ಇಂದಿನಿಂದ ಶುಭಾರಾಂಭ
ರಾಷ್ಟ್ರೀಯ, ಅಂತರಾಷ್ಟ್ರೀಯ ಬ್ರ್ಯಾಂಡೆಡ್ ರೆಡಿಮೇಡ್ ಗಾರ್ಮೆಂಟ್‌ಗಳ ಭಾರೀ ರಿಯಾಯಿತಿ ಮಾರಾಟ

ಸೂಚನೆ : ಕಳೆದ ಕರೋನಾ ಮಹಾಮಾರಿ ಕಾರಣದಿಂದ ಲಾಕ್‌ಡೌನ್ ಸಂದರ್ಭದಲ್ಲಿ ಆನ್‌ಲೈನ್ ಶಾಪಿಂಗ್ ಟ್ರೆಂಡ್ ಹೆಚ್ಚಾಗಿದ್ದರಿಂದ ಸ್ಥಳೀಯ ಬಟ್ಟೆ ವ್ಯಾಪಾರಿಗಳು ಫ್ಯಾಕ್ಟರಿಗಳಿಂದ ಅತೀ ಕಡಿಮೆ ಪ್ರಮಾಣ ಬಟ್ಟೆಗಳನ್ನು ಖರೀದಿಸುತ್ತಿದ್ದಾರೆ. ಇದರ ಫಲವಾಗಿ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಸರಕುಗಳು ಫ್ಯಾಕ್ಟರಿಯಲ್ಲಿಯೇ ಶೇಖರಿಸಲ್ಪಟ್ಟಿವೆ. ಈ ಕಾರಣಗಳಿಂದ ಫ್ಯಾಕ್ಟರಿಯು ಉಳಿದ ಎಲ್ಲಾ ಸರಕಗಳನ್ನು ದಾವಣಗೆರೆಯಲ್ಲಿ ಮಾರಾಟ ಮಾಡಲು ನಿರ್ಧರಿಸಿದ್ದೇವೆ.
ನಾವು ಲೇಡಿಸ್, ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳಿಗೆ ಭಾರೀ ರಿಯಾಯಿತಿಯನ್ನು ಕೊಡುತ್ತಿದ್ದೇವೆ.

ARROW USA·1851 ಜೆಂಟ್ಸ್ ಶರ್ಟ್ಸ್
M.R.P. ರೂ. 1999/- ರಿಂದ ರೂ. 3499/-
ಸ್ಪೋರ್ಟ್ಸ್, ನ್ಯೂಯಾರ್ಕ್, ಪ್ರಸಿಡೆಂಟ್ ಕಲೆಕ್ಷನ್
ಕೇವಲ ರೂ. 899/-

Lee ಲೀ ಪುರುಷರ ಉಡುಪುಗಳು ಡಿನಿಮ್ ಉಡುಪುಗಳು
M.R.P. ರೂ. 2999/- ರಿಂದ ರೂ. 4999/-
ಕೇವಲ ರೂ. 999/-

Pepe Jeans LONDON ಮಹಿಳಾ ಉಡುಪುಗಳು
M.R.P. ರೂ. 1299/- ರಿಂದ 2999/-
ಪೆಪೆ ಡೆನಿಮ್ ಜೀನ್ಸ್, ಟೀ ಶರ್ಟ್, ಫುಲ್‌ಓವರ್, ಜಾಕೆಟ್, ಟಾಪ್, ಶರ್ಟ್, ನೈಟ್ ಪ್ಯಾಂಟ್, ಶಾರ್ಟ್, ಇತರ ರಿಯಾಯಿತಿ ನಂತರ
ಕೇವಲ ರೂ. 399/- ರಿಂದ 499/-

50,000 ವಿವಿಧ ಪ್ರಕಾರ ಜೆಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಶರ್ಟ್, ಟೀ-ಶರ್ಟ್, ಲೋವೇರ್, ಬರ್ಮುಡಾ, ಟಾಪ್, ಕೇಪ್ರಿ, ಲೇಡಿಸ್‌ಪೈಜಾಮ, ಬಾಬಾ ಸೂಟ್, ಫ್ಯಾನ್ಸಿ ಕಿಡ್ಸ್ ಡ್ರೆಸ್, ಸ್ಯಾರೀ, ಕುರ್ತೀಸ್ ಹಾಗೂ ಇತರೆ
ಕೇವಲ ರೂ. 150/- ರಿಂದ 350/-

ವಿಶೇಷ ಕೌಂಟರ್ : ಮಲ್ಟಿ ಬ್ರಾಂಡೆಡ್ ಗಾರ್ಮೆಂಟ್ಸ್, ಜೆಂಟ್ಸ್ : ಪ್ಯಾಂಟ್, ನೆಟೆಡ್ ಕಾಟನ್ ಸ್ಟ್ರೆಚ್, ಮಸ್ಸರೈಸ್ ಕಾಟನ್ ಸ್ಟ್ರೆಚ್, ಸಾರ್ಟಿನ್ ಸ್ಟ್ರೆಚ್, ಸಿಲ್ಕಿ ಸ್ಟ್ರೆಚ್, 100 ಕಾಟನ್ ಸ್ಟ್ರೆಚ್, ಡಾಬಿ ಕಾಟನ್ ಸ್ಟ್ರೆಚ್, ಫಿಟ್ ಕಂಫರ್ಟ್ ಫಿಟ್, ನ್ಯಾರೋ ಫಿಟ್, ಪೆನ್ಸಿಲ್ ಫಿಟ್, ರಿಲ್ಯಾಕ್ಸ್‌ಡ್ ಫಿಟ್, ಕ್ಯಾಷುಯಲ್, ಫಾರ್ಮಲ್ ಟ್ರೌಷರ್ ಶರ್ಟ್ಸ್ ಫಾರ್ಮಲ್, ಆಫೀಸ್‌ವೇರ್, ಕ್ಯಾಷುಯಲ್, ಪಾರ್ಟಿವೇರ್, ಬ್ಯುಸಿನೆಸ್ ಕ್ಲಾಸ್, ಲೋವೇರ್, ಟೀ-ಶರ್ಟ್, ಮಲ್ಟಿ ಬ್ರ್ಯಾಂಡೆಡ್ ಲೇಡಿಸ್ ಕುರ್ತೀಸ್ ಸಲ್ಫ್ ಚೂಸ್ ಇತರೆ
ಕೇವಲ ರೂ. 400/- ರಿಂದ 999/- ರವರೆಗೆ

ಜೀನ್ಸ್ ಪ್ಯಾಂಟ್ ಸೈಜ್ : 28 ರಿಂದ 46 ಶರ್ಟ್ ಸೈಜ್ : 36 ರಿಂದ 46

MRP 200/- to 300/- ರೂ.
ಬ್ರ್ಯಾಂಡೆಡ್ ಬ್ರಾ & ಪ್ಯಾಂಟೀಸ್
ಕಾಟನ್ ಚಿಕನ್ ಬ್ರಾ
ಸ್ಟ್ರೆಚಬಲ್ ಬ್ರಾ
ಅಲ್ಟ್ರಾ ಮಾಡೆಲ್ ಬ್ರಾ
ಮಿಸ್‌ವರ್ಲ್ಡ್ ಬ್ರಾ
ಇಂಪೋರ್ಟೆಡ್ ಬ್ರಾ
ಸ್ಪೋರ್ಟ್ಸ್ ಬ್ರಾ
ಸಿಲ್ಕ್ ಪ್ಯಾಂಟೀಸ್
ಪ್ರಿಂಟೆಡ್ ಕಾಟನ್ ಪ್ಯಾಂಟೀಸ್
ಅಲ್ಟ್ರಾ ಮಾಡೆಲ್ ಪ್ಯಾಂಟೀಸ್
ಇಂಪೋರ್ಟ್‌ಡೆ ಪ್ಯಾಂಟೀಸ್
ಕೇವಲ ರೂ. 50/-

ನೇರವಾಗಿ ಸೀರೆ ಮಿಲ್ ಮುಖಾಂತರ ರೀಟೆಲ್ ಗ್ರಾಹಕರಿಗೆ
ಗ್ರೀನ್ ವಿತ್ ಮೆರೂನ್ ಝರಿ ವರ್ಕ್ ಸ್ಯಾರಿ
ವೈಯಲೆಟ್ ಸ್ಯಾಂಡಲ್ ಸ್ಯಾರಿ
ಟ್ರೆಡಿಷನಲ್ ಬುಟ್ಟಿ ಸ್ವರ್ಣಲತ ಸಿಲ್ಕ್‌ಸ್ಯಾರಿ
ಚಾಂದೇರಿ ಸಿಲಕ್ ಸ್ಯಾರಿ, ಕಾಟನ್ ಸ್ಯಾರಿ
ಜ್ಯಾರ್ಜೆಟ್ ಶಿಫಾನ್ ಪ್ರಿಂಟೆಡ್, ಕ್ರೇಪ್ ಸಿಲ್ಕ್ ಸ್ಯಾರಿ
ಪೈಠಾಣೀ ಸ್ಯಾರಿ ಸಾವಿರಾರು ಬಗೆಯ ಫ್ಯಾನ್ಸಿ, ಕಾಟನ್ ಮತ್ತು ಸಿಲ್ಕ್ ಸೀರೆ
ಕೇವಲ ರೂ. 150/- ರಿಂದ 200/- ಮಾತ್ರ

ಬ್ರ್ಯಾಂಡೆಡ್ ಡಿಸೈನರ್ ಲೇಡಿಸ್ ಕುರ್ತಿ
ಮಿಂಟ್ ಗ್ರೀನ್ ಕಾಟನ್ ಕುರ್ತಿ
ವಿವಿಧ ಬಣ್ಣಗಳ ಕುರ್ತಿಗಳು
ಎಕ್ಸಲೆಂಟ್ ಪಾರ್ಟಿವೇರ್
ಎಂಬ್ರಾಡೆಡ್ ರಯಾನ್ ರೆಗ್ಯುಲರ್ ಕುರ್ತಿ
ಬ್ಲಾಕ್ ಪ್ರಿಂಟೆಡ್ ಕಾಟನ್ ಲಾಂಗ್
ಬಾಲಿವುಡ್ ವುಮೆನ್ ಡಿಸೈನರ್ ಬ್ಯೂಟಿಫುಲ್
abof
ಕೇವಲ ರೂ.400/- ರಿಂದ 600/- ಮಾತ್ರ

ಕೇವಲ 4 ದಿನಗಳ ಮಾರಾಟ ಮಾತ್ರ 3, 4, 5, & 6ನೇ ಫೆಬ್ರವರಿ 2021
ಸಮಯ : ಬೆಳಿಗ್ಗೆ 10 ರಿಂದ ರಾತ್ರಿ 9ರವರೆಗೆ No Lunch Break

ತೊಗಟವೀರ ಸಮುದಾಯ ಭವನ
6ನೇ ಮುಖ್ಯರಸ್ತೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.

All Major Debit / Credit Cards, Google Pay, Phone Pe Accepted
ಸೂಚನೆ : ಸರ್ಕಾರದಿಂದ ನಿರ್ದೇಶಿಸಲಾದ ಮಾಸ್ಕ್ ಮತ್ತು ಸಾಮಾಜಿಕ ಅಂತರ ಕಡ್ಡಾಯ
Entry and Parking Free







ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ

ದಾವಣಗೆರೆ ನಗರದ ಜನತೆಗಾಗಿ ಮಹಾನಗರ ಪಾಲಿಕೆಯ ಸೇವೆಗಳು ಮತ್ತು ಸೌಲಭ್ಯಗಳನ್ನು ನಿಮ್ಮ ಮನೆ ಬಾಗಿಲಿಗೆ ನೀಡುವ ಕಾರ್ಯಕ್ರಮವನ್ನು ಮಹಾಪೌರರಾದ
ಶ್ರೀ ಬಿ.ಜಿ. ಅಜಯ್‌ಕುಮಾರ್
ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.
ಈ ವಿಶೇಷ ಕಾರ್ಯಕ್ರಮದ ಸದುಪಯೋಗವನ್ನು 27 ನೇ ವಾರ್ಡಿನ ಸಮಸ್ತ ನಾಗರಿಕರು ಪಡೆದುಕೊಳ್ಳಬೇಕೆಂದು ವಿನಂತಿಸುತ್ತೇವೆ.

ಶ್ರೀ ಬಿ.ಜಿ. ಅಜಯ್ ಕುಮಾರ್
ಪೂಜ್ಯ ಮಹಾಪೌರರು,
ಮಹಾನಗರ ಪಾಲಿಕೆ, ದಾವಣಗೆರೆ.



ದಿನಾಂಕ : 03-02-2021, ಬುಧವಾರ
ಸಮಯ : ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ
ಸ್ಥಳ : 12ನೇ ಕ್ರಾಸ್, 3ನೇ ಮೇನ್ ಹಳೇ ಜಿಲ್ಲಾ ಖಜಾನೆ, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ.

ಶ್ರೀಮತಿ ಯಶೋಧ ಯಗ್ಗಪ್ಪ
ಸದಸ್ಯರು, 27ನೇ ವಾರ್ಡ್
ಮಹಾನಗರ ಪಾಲಿಕೆ, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte